ಸಂಪುಟ : 9 ಸಂಚಿಕೆ 24 ಪುಟ : 4 ಬೆಲೆ : 3.00 ಗುರುವಾರ ಫೆಬ್ರವರಿ 22, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 24 Pages : 4 Price : 3.00 Thursday February 22, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ಇಂದು ವಿವಿಧೆಡೆ ನೀರು ಪೂರೈಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 22 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ 27 ಮುಳಗುಂದರ ಲೈನ್, ಹುಬ್ಬಳ್ಳಿಮಠದವರ ಲೈನ್, ಪಾವಡೆಯವರ ಲೈನ್, ಮೆಹರವಾಡೆ ಮಾಸ್ತರ ಲೈನ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 26 ಹಳೆಬಸ್ ಸ್ಟ್ಯಾಂಡ್ ಲೈನ್, ಅಕ್ಕನ ಬಳಗ, ಮೂರು ಶಿಳ್ಳಿನ ಸಂದಿ, ಸೋಡಾದ ಅಂಗಡಿ ಲೈನ್, ಜನತಾ ಕಾಲೋನಿ ಲೈನ್, ಕಲಾಮಂದಿರ ರೋಡ್, ಕೃಷ್ಣ ಟಾಕೀಸ್ ಲೈನ್, ಬೇವಿನ ಕಟ್ಟಿಯವರ ಲೈನ್ ಭಾಗ -1,2 ಸಂಗಮ ಬಜಾರ್, ಲಕ್ಷ್ಮೀಚಾಳ, ಜೆಟಿ ಮಠದ ರೋಡ್, ಗೋಡಚಿ ಖಾನಾವಳಿ ಲೈನ್, ಅಂಗಡಿಯವರ ಲೈನ್, ನಾಲಬಂದರ ಲೈನ್, ಡವಳಿಯವರ ಲೈನ್, ಚಳ್ಳ ಮರದ ಲೈನ್, ತ್ರಿಮೂರ್ತಿ ಲಾಡ್ಜ್ ಲೈನ್, ಮಾಳೆಕೊಪ್ಪದ ಮಠದ ಸಂದಿ, ದನದ ದವಾಖಾನೆ ಲೈನ್, ಉರ್ದು ಶಾಲೆಯ ಹಿಂದಿನ ಭಾಗ.

ವಾರ್ಡ್ ನಂ. 33 ಜಾಕಿರ್ ಹುಸೇನ್ ಕಾಲೋನಿ, ವೀರೇಶ್ವರ ನಗರ, ಗಡ್ಡಿಯವರ ಲೈನ್, ಕರಿ ಗೌಡ್ರ ಲೈನ್, ಮುಳಗುಂದ ರೋಡ, ಬ್ಯಾಂಕರ್ಸ್ ಕಾಲೋನಿ, ಪಂಚಮುಖಿ ಆಂಜನೇಯ ಗುಡಿ, ಸಾಹುಕಾರ ತೋಟದ ಲೈನ್, ಕಲಾಲರ ಲೈನ್, ಅಬ್ಬಿಗೇರಿ ಲೈನ್, ಬೂದಿಹಾಳ-ಮೆಹರವಾಡೆ ಲೈನ್.

ವಾರ್ಡ್ ನಂ. 27, 28 ಸ್ಟೇಡಿಯಂ, ಕುರುಡಗಿ ದವಾಖಾನೆ ಲೈನ್, ನಂದೀಶ್ವರ ಮಠದ ಹಿಂದಿನ ಭಾಗ, ರೊಟ್ಟಿಯವರ ಲೇಔಟ್, ಹೊಸಮನಿ ಸರ್ ಲೈನ್, ಸಜ್ಜನ ಕುಲಕರ್ಣಿಯವರ ಲೈನ್, ಎಸ್ ಬಿ ಸಂಕಣ್ಣವರ ಲೈನ್, ತಂಬ್ರಳ್ಳಿ ಮಠದ ಲೈನ್, ಉಪ್ಪಾರ ಮಾಸ್ತರ್ ಲೈನ್, ಕೆ ಹೆಚ್ ಪಾಟೀಲರ ಲೈನ್, ಅಕ್ಕಿಯವರ ಲೈನ್. ವಾರ್ಡ್ ನಂ. 6 ಕೊಟಗಿ ಮಾಸ್ತರ್ ಲೈನ್, ಪಾಟೀಲರ ಲೈನ್, ಸ್ವಾಮಿಯವರ ಲೈನ್, ಹನುಮಂತ ದೇವರ ಗುಡಿ.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತೋಂಟದಾರ್ಯ ಮಠದಲ್ಲಿ ಲಿಂ. ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ 75ನೇ ಜಯಂತಿ, 'ಭಾವೈಕ್ಯತಾ ದಿನಾಚರಣೆ'

## ಭಾವೈಕ್ಯತೆಯ ವಾತಾವರಣ ನಿರ್ಮಿಸುವುದು ಎಲ್ಲರ ಕರ್ತವ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತಿದ್ದ, ತಮ್ಮ ಹೃದಯದ ಬಾಗಿಲನ್ನು ಸರ್ವರಿಗೂ ಮುಕ್ತವಾಗಿರಿಸಿದ್ದ ಶ್ರೀಗಳ ಜಯಂತಿಯನ್ನು ಭಕ್ತರೆಲ್ಲ 'ಭಾವೈಕ್ಯತೆಯ ದಿನ'ವನ್ನಾಗಿ ಆಚರಿಸುತ್ತಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಸೂರ್ಯ-ಚಂದ್ರರಿರುವವರೆಗೆ ಅವರು ನಮಗೆಲ್ಲ ಭಾವೈಕ್ಯತೆಯ ಗುರುಗಳಾಗಿರುತ್ತಾರೆ ಎಂದು ಮುಂಡರಗಿ ತೋಂಟದಾರ್ಯ ಶಾಖಾಮಠದ ನಿಜಗುಣಪ್ರಭು ತೋಂಟದಾರ್ಯ ಶ್ರೀಗಳು ನುಡಿದರು.

ಅವರು ಬುಧವಾರ ನಗರದ ತೋಂಟದಾರ್ಯ ಮಠದಲ್ಲಿ ಲಿಂ. ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ 75ನೇ ಜಯಂತಿ ಅಂಗವಾಗಿ ಜರುಗಿದ 'ಭಾವೈಕ್ಯತಾ ದಿನಾಚರಣೆ' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಪೂಜ್ಯರು ಭಾವೈಕ್ಯತೆಯ ಬಂಧುಗಳಾಗುವ ಜೊತೆಗೆ ವಿಶ್ವಬಂಧುಗಳಾಗಿದ್ದರು. ರಾಜ್ಯ ಸರ್ಕಾರವು ವಿಶ್ವಗುರು ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕನೆಂದು ಘೋಷಿಸಿರುವ ಈ ಸಮಯದಲ್ಲಿ ಪೂಜ್ಯರು ಇದ್ದಿದ್ದರೆ ತುಂಬಾ ಸಂತಸಪಡುತ್ತಿದ್ದರು. ವೈಚಾರಿಕತೆ ಎಂದರೆ ಎಲ್ಲವನ್ನೂ ತೊರೆಯುವ ಸ್ವೇಚ್ಛಾಚಾರವಲ್ಲ, ವೈಚಾರಿಕತೆ ಹೇಗೆ ಮಾದರಿಯಾಗಿರಬೇಕು ಎನ್ನುವುದನ್ನು ಲಿಂಗೈಕ್ಯ ಗುರುಗಳ ಬದುಕಿನುದ್ದಕ್ಕೂ ಆಚರಿಸಿದ ಆಚರಣೆಗಳಿಂದ ತಿಳಿದುಕೊಳ್ಳಬೇಕು ಎಂದರು.



> ಲಿಂಗೈಕ್ಯ ಗುರುಗಳು ತಮ್ಮ ಜೀವಿತಾವಧಿಯಲ್ಲಿ ಎಂದಿಗೂ ಜನ್ಮದಿನ ಆಚರಣೆ ಮಾಡಿಕೊಂಡವರಲ್ಲ. ಜೀವನದುದ್ದಕ್ಕೂ ಅವರು ಸಮಾಜದಲ್ಲಿ ಭಾವೈಕ್ಯತೆಯ ಅನುಷ್ಠಾನಕ್ಕಾಗಿ ಶ್ರಮಿಸಿದರು. ಆದ್ದರಿಂದ ಅವರು ಲಿಂಗೈಕ್ಯರಾದ ಬಳಿಕ ಅವರ ಅಭಿಮಾನಿಗಳೆಲ್ಲ ಸೇರಿಕೊಂಡು ಶ್ರೀಗಳ ಜನ್ಮದಿನವನ್ನು ಭಾವೈಕ್ಯತಾ ದಿನವನ್ನಾಗಿ ಆಚರಿಸುತ್ತಾ ಬರುತ್ತಿದ್ದಾರೆ. ಸರ್ವ ಜನಾಂಗಗಳ ಅಭಿಮಾನಿಗಳು ಪ್ರತಿ ವರ್ಷ ಈ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಲಿಂಗೈಕ್ಯ ಗುರುಗಳನ್ನು ಸ್ಮರಿಸುತ್ತಾರೆ. ಭಾವೈಕ್ಯತೆ ಎಂಬುದು ಯಾರೊಬ್ಬರ ಸೊತ್ತಲ್ಲ, ಭಾವೈಕ್ಯತೆಯ ವಾತಾವರಣ ನಿರ್ಮಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು.
>
> – ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು.

ಪೂಜ್ಯರ ಜಯಂತಿ ಅಂಗವಾಗಿ ಪ್ರತಿವರ್ಷದಂತೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿಯಿಂದ ಶ್ರೀಮಠದ ವರೆಗೆ 'ಭಾವೈಕ್ಯತಾ ಯಾತ್ರೆ' ಜರುಗಿತು. ಯಾತ್ರೆಯುದ್ದಕ್ಕೂ ಶ್ರೀಗಳ ನಾಲ್ಕು ಸಾವಿರಕ್ಕೂ ಅಧಿಕ ಅಭಿಮಾನಿಗಳು, ಬಸವಾಭಿಮಾನಿಗಳು ಹಾಗೂ ಶ್ರೀಮಠದ ಭಕ್ತರು ಪಾಲ್ಗೊಂಡಿದ್ದರು. ಮೆರವಣಿಗೆಯಲ್ಲಿ ಸರ್ವ ಧರ್ಮಗಳನ್ನು ಪ್ರತಿನಿಧಿಸುವ ಧಾರ್ಮಿಕ ಮುಖಂಡರ ಭಿತ್ತಿಚಿತ್ರಗಳು ಜನಮನ ಸೆಳೆದವು. ಬಸವೇಶ್ವರ ಶಾಲೆಯ ವಿದ್ಯಾರ್ಥಿಗಳು ಸರ್ವಧರ್ಮದ ಧಾರ್ಮಿಕ ಮುಖಂಡರ ರೂಪಕಗಳನ್ನು ಸಾದರಪಡಿಸಿದರು. ಯಾತ್ರೆಯು ಭಾವೈಕ್ಯತೆಯ-ಸಾಮರಸ್ಯದ ಸಂದೇಶವನ್ನು ಹೇಳುತ್ತಾ ಪ್ರತಿಧ್ವನಿಸಿತು.

▸▸ 3ನೇ ಪುಟಕ್ಕೆ

## ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ: ವೀಕ್ಷಕರ, ಮಾರ್ಗಾಧಿಕಾರಿಗಳ ನೇಮಕ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2024ರ ಮಾರ್ಚ್ ತಿಂಗಳಲ್ಲಿ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ್ 1ರಿಂದ 22 ರವರೆಗೆ ಬೆಳಿಗ್ಗೆ 10.15 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ನಡೆಸಲಿದೆ.

ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳು ಸುಗಮವಾಗಿ ಜರುಗುವ ಮತ್ತು ಶಿಸ್ತು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು, ಮಾರ್ಗಾಧಿಕಾರಿಗಳನ್ನು ಹಾಗೂ ತ್ರಿಸದಸ್ಯರನ್ನೊಳಗೊಂಡ ಪ್ರಶ್ನೆ ಪತ್ರಿಕಾ ಪಾಲಕರ ಸಮಿತಿಯನ್ನು ನೇಮಕ ಮಾಡಲಾಗಿದೆ.

ಪರೀಕ್ಷೆಗಳು ಜರುಗುವ ದಿನಗಳಂದು ತಮಗೆ ವಹಿಸಿದ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷೆಗಳನ್ನು ಸುಗಮವಾಗಿ ಜರುಗಿಸಲು ಹಾಗೂ ಮಾರ್ಗಾಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಕಟ್ಟುನಿಟ್ಟಾಗಿ ನಿರ್ವಹಿಸಲು ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ತಿಳಿಸಿದ್ದಾರೆ.

### ಪಟ್ಟಣದಲ್ಲಿ ಜೆಟಿಟಿಸಿ ನಿರ್ಮಾಣಕ್ಕೆ ಸರಕಾರದಿಂದ 150 ಕೋಟಿ ರೂ. ಅನುದಾನ

## ಬಜೆಟ್‌ನಲ್ಲಿ ರೋಣಕ್ಕೆ ವಿಶೇಷ ಕೊಡುಗೆ

■ ವಿಜಯಸಾಕ್ಷಿ ಸುದ್ದಿ, ರೋಣ

ಹಿಂದುಳಿದ ತಾಲೂಕು ಎಂಬ ಹೆಗ್ಗಳಿಕೆಯನ್ನು ಹೊಂದಿದ್ದ ರೋಣ ತಾಲೂಕಿಗೆ ಈ ಬಾರಿಯ ಬಜೆಟ್‌ನಲ್ಲಿ ಸರಕಾರ 150 ಕೋಟಿ ರೂ.ಗಳ ವಿಶೇಷ ಅನುದಾನವನ್ನು ನೀಡುವ ಮೂಲಕ ಪಟ್ಟಣದ ಅಭಿವೃದ್ಧಿಗೆ ಮುತುವರ್ಜಿ ವಹಿಸಿದ್ದು, ಶಾಸಕ ಜಿ.ಎಸ್. ಪಾಟೀಲರ ಅಭಿವೃದ್ಧಿಪರ ಚಿಂತನೆಗೆ ಸಾಕ್ಷಿಯಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದ ತಾಲೂಕಿನಲ್ಲಿ ಜೆಟಿಟಿಸಿ ಕೋರ್ಸ್ ಆರಂಭವಾಗುತ್ತಿರುವುದು ಈ ಭಾಗದ ಜನರಲ್ಲಿ ಹೊಸ ಮನ್ವಂತರ ಮೂಡುವಂತೆ ಮಾಡಿದೆ. ಶಾಸಕ ಜಿ.ಎಸ್. ಪಾಟೀಲ ತಮ್ಮ ಅಧಿಕಾರದ ಅವದಿಯಲ್ಲಿ ಶಹರ ಹಾಗೂ ಗ್ರಾಮೀಣ ಭಾಗಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ 6 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಸೋಲಾರ್ ವಿದ್ಯುತ್ ದೀಪಗಳನ್ನು ಸಹ ವಿತರಿಸಿದ್ದು ಸ್ಮರಣೀಯ.



ಇದಲ್ಲದೆ, ರೋಣ-ಮಲ್ಲಾಪೂರ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೂ ಗಮನವಹಿಸಿದ ಶಾಸಕರು ಸರಕಾರದ ಚಿತ್ತ ಸೆಳೆದು, ಈ ರಸ್ತೆ ಅಭಿವೃದ್ಧಿಯ ಕುರಿತಾಗಿಯೂ ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪವಾಗಿರುವುದು ಹೆದ್ದಾರಿ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಅಲ್ಲದೆ ಈ ರಸ್ತೆ ನಿರ್ಮಾಣದಿಂದ ಹುಬ್ಬಳ್ಳಿ-ಹೈದ್ರಾಬಾದ್ ಸಂಪರ್ಕಕ್ಕೆ ಹೆಚ್ಚಿನ ಅನುಕೂಲವಾಗಲಿದೆ.

> ಇದೊಂದು ಸಮಾಜ ಹಾಗೂ ಸಮುದಾಯದ ಉನ್ನತೀಕರಣಕ್ಕೆ ಸಹಕಾರಿಯಾಗುವ ಬಜೆಟ್ ಆಗಿದೆ. ಇನ್ನು ರೋಣದಲ್ಲಿ ಜೆಟಿಟಿಸಿ ಆರಂಭಿಸುತ್ತಿರುವುದು ಉದ್ಯೋಗ ಸೃಷ್ಟಿಸಿಲು ಅನುಕೂಲವಾಗಲಿದೆ. ಒಟ್ಟಿನಲ್ಲಿ ಬಜೆಟ್ ಜನರಲ್ಲಿ ಹೊಸ ಭರವಸೆಯನ್ನು ತುಂಬಿದೆ. ಸರ್ಕಾರದ ಗಮನಸೆಳೆಯುವಲ್ಲಿ ಸಫಲರಾದ ನಮ್ಮ ಶಾಸಕ ಜಿ.ಎಸ್. ಪಾಟೀಲರ ಶ್ರಮವಿದೆ.
>
> – ಅಂದಪ್ಪ ಬಿಚ್ಚೂರ.
> ಮುಖಂಡರು, ರೋಣ

ಮಧ್ಯಮ ವರ್ಗದ ಮೇಲೆ ತೆರಿಗೆ ಹೆಚ್ಚಿಸುವ ಬಜೆಟ್ ಇದಾಗಿದ್ದು, ಜನ ಸಾಮಾನ್ಯರಿಗೆ ಅನುಕೂಲವಿಲ್ಲ. ಮುದ್ರಾಂಕ, ಅಬಕಾರಿ, ತೆರಿಗೆ ಸುಂಕವನ್ನು ಹೆಚ್ಚಳ ಮಾಡಿದ್ದು, ಇದ್ದಿದ್ದನ್ನು ಕಿತ್ತುಕೊಂಡು ಮತ್ತೊಂದು ಕಡೆಗೆ ಕೊಡುವ ಪ್ರಯತ್ನ ಮಾಡಲಾಗಿದೆ. ಘೋಷಣೆ ಮಾಡಿದ ಇತರ ಯೋಜನೆಗಳು ಜಾರಿಯಾಗುವುದು ಅನುಮಾನವಿದೆ ಎಂದು ರೋಣ ಮಂಡಲ ಬಿಜೆಪಿ ಘಟಕದ ಅಧ್ಯಕ್ಷ ಮುತ್ತಣ್ಣ ಕಡಗದ ಪ್ರತಿಕ್ರಿಯಿಸಿದರು.

ಅಲ್ಲದೆ, ಜನರು ನಿರೀಕ್ಷಿಸಿದಂತೆ ಜಿಂಕೆ ವನ ಹಾಗೂ ಕೈಗಾರಿಕೆ ಸ್ಥಾಪನೆಗೆ ಒತ್ತು ನೀಡಿಲ್ಲವಾದರೂ ಸಹ ಮುಂದಿನ ದಿನಗಳಲ್ಲಿ ಅವಕಾಶ ದೊರಕಬಹುದು ಎಂಬ ನಿರೀಕ್ಷೆಯನ್ನು ಸಾರ್ವಜನಿಕರು ಹೊಂದಿದ್ದಾರೆ. ಒಟ್ಟಿನಲ್ಲಿ ಈ ಬಾರಿಯ ಬಜೆಟ್ ರೋಣಕ್ಕೆ ತುಸು ಸಿಹಿಯುಣ್ಣಿಸಿದೆ.

### ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆಯಲ್ಲಿ ನ್ಯಾ. ಕೆ.ಗುರುಪ್ರಸಾದ

## ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳು ಸಾಮಾಜಿಕ ನ್ಯಾಯದ ತಳಹದಿಗಳಾಗಿವೆ. ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಪ್ರತಿಯೊಬ್ಬರಿಗೂ ನ್ಯಾಯ ದೊರಕುವಂತಾಗಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಹಿರಿಯ ದಿವಾಣಿ ನ್ಯಾಯಾಧೀಶರಾದ ಕೆ. ಗುರುಪ್ರಸಾದ ನುಡಿದರು.

ಅವರು ಗದಗ ನಗರದಲ್ಲಿರುವ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾನತೆಯ ಪರಿಕಲ್ಪನೆಯಡಿ 2007ರಲ್ಲಿ ವಿಶ್ವ ಸಂಸ್ಥೆಯಲ್ಲಿ ಠರಾವು ಪಾಸ್ ಮಾಡಲಾಗಿದ್ದು, ಅದರ ಪ್ರಕಾರ ವಿಶ್ವದಾದ್ಯಂತ 2009ರಿಂದ ಪ್ರತಿ ವರ್ಷ ಫೆಬ್ರುವರಿ 20ರಂದು ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆಯನ್ನು ಆಚರಿಸುತ್ತಾ ಬರಲಾಗಿದೆ ಎಂದು ತಿಳಿಸಿದರು.

ಸಂವಿಧಾನದ ಪೀಠಿಕೆಯಲ್ಲಿರುವ ಪ್ರಮುಖ ಅಂಶಗಳಲ್ಲಿ ಸಾಮಾಜಿಕ ನ್ಯಾಯವೂ ಒಂದು. ನಮ್ಮ ಸಮಾಜದಲ್ಲಿರುವ ಜನರ ನಡುವೆ ಜಾತಿ-ಧರ್ಮಾಧಾರಿತ, ಲಿಂಗಾಧಾರಿತ ವ್ಯತ್ಯಾಸಗಳಿವೆ. ಅವುಗಳನ್ನು ಹೋಗಲಾಡಿಸಿ ಪ್ರತಿಯೊಬ್ಬರಿಗೂ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಮೀಸಲಾತಿ ಸೇರಿದಂತೆ ಹತ್ತು ಹಲವಾರು ಕಾನೂನುಗಳನ್ನು ಜಾರಿಗೆ ತರಲಾಗಿದೆ ಎಂದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ತಾಲೂಕು ಸಮಾಜ ಕಲ್ಯಾಣಾಧಿಕಾರಿ ವಿಜಯಲಕ್ಷ್ಮಿ ಇಂಗಳಳ್ಳಿ ಮಾತನಾಡಿದರು. ವಿದ್ಯಾರ್ಥಿನಿ ಸಂಗೀತಾ ಪ್ರಾರ್ಥನಾ ಗೀತೆ ಹಾಡಿದರು. ಇನ್ನೋರ್ವ ವಿದ್ಯಾರ್ಥಿನಿ ನೇತ್ರಾವತಿ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು. ಕಾರ್ಯಕದಲ್ಲಿ ವಸತಿ ನಿಲಯದ ವಾರ್ಡನ್ ವಸಂತಾ ಸೇರಿದಂತೆ ವಿದ್ಯಾರ್ಥಿನಿಯರು ಹಾಜರಿದ್ದರು.

## ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ : ಪರೀಕ್ಷಾ ಕೇಂದ್ರಗಳ ಸುತ್ತಲೂ ಪ್ರತಿಬಂಧಕಾಜ್ಞೆ ಜಾರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2024ರ ಮಾರ್ಚ್ ತಿಂಗಳಲ್ಲಿ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ್ 1ರಿಂದ 22 ರವರೆಗೆ ಬೆಳಿಗ್ಗೆ 10.15 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ನಡೆಸಲಿದೆ.

ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ.

ಪರೀಕ್ಷೆಗಳು ಸುಗಮವಾಗಿ ಜರುಗುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾರ್ಚ್ 1 ರಿಂದ 22 ರವರೆಗೆ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ ಅಂಗಡಿ, ಬುಕ್ ಸ್ಟಾಲ್, ಫೋಟೋ ಕಾಪಿಯರ್ ಬಂದ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೆ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಪ್ಪತಗುಡ್ಡದಲ್ಲಿ ಸಂವಿಧಾನ ಜಾಗೃತಿ ಜಾಥಾ



■ ವಿಜಯಸಾಕ್ಷಿ ಸುದ್ದಿ, ಗದಗ

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಪ್ರಶಾಂತ ವರಗಪ್ಪನವರ ನೇತೃತ್ವದಲ್ಲಿ ಕಪ್ಪತ್ತಗುಡ್ಡದಲ್ಲಿ ಬೈಕ್ ರ್‍ಯಾಲಿ ಮೂಲಕ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಸಂವಿಧಾನ ಪೀಠಿಕೆಯನ್ನು ಪಠಿಸಲಾಯಿತು. ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಸಂವಿಧಾನ ಪೀಠಿಕೆಯನ್ನು ಜನಸಾಮಾನ್ಯರಿಗೆ ಅರ್ಥೈಸಬೇಕು. ಈ ಮೂಲಕ ಜನ ಸಾಮಾನ್ಯರು ಸಹ ಸಂವಿಧಾನವನ್ನು ಅರಿತು ತಮ್ಮ ಹಕ್ಕು ಕರ್ತವ್ಯಗಳನ್ನು ಪಾಲಿಸಬೇಕು. ಸಂವಿಧಾನ ದತ್ತವಾಗಿ ಇರುವ ಹಕ್ಕುಗಳ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಜನ ಸಾಮಾನ್ಯರೆಲ್ಲರೂ ಒಂದು ಎಂಬ ಭ್ರಾತೃತ್ವ ಭಾವನೆ ಮೂಡಿಸುವ ಆಶಯವನ್ನು ಸಂವಿಧಾನ ಜಾಗೃತಿ ಕಾರ್ಯಕ್ರಮ ಒಳಗೊಂಡಿದೆ.

## ಪರೀಕ್ಷಾ ಕೇಂದ್ರಗಳ ಸುತ್ತಲೂ ಪ್ರತಿಬಂಧಕಾಜ್ಞೆ ಜಾರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸಿಬಿಎಸ್‌ಇ ವತಿಯಿಂದ 10ನೇ ತರಗತಿ ಪರೀಕ್ಷೆಗಳು ಮಾರ್ಚ್ 13 ರವರೆಗೆ ಜರುಗಲಿವೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಜಿಲ್ಲೆಯ 4 ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ ಹಾಗೂ ಫೆಬ್ರವರಿ 21 ರಿಂದ ಮಾರ್ಚ್ 13 ರವರೆಗೆ ಬೆಳಿಗ್ಗೆ 8.30 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್ ಸ್ಟಾಲ್, ಫೋಟೋ ಕಾಪಿಯರ್ ಬಂದ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೆ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು ತಿಳಿಸಿದ್ದಾರೆ.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ
ಹೃದಯದಿಂದ ಕೇಳಿಸಿಕೊಳ್ಳಿ
–ಸುಭಾಷಿತ

## ಸಂಪಾದಕೀಯ

# ಉತ್ತರದ ನಾಯಕರ ಉದಾಸೀನ

ರಾಜ್ಯದಲ್ಲಿ ಇಂದಿನಿಂದ ಕೊಬ್ಬರಿ ಖರೀದಿ ಆರಂಭವಾಗಿದೆ. ಒಬ್ಬ ರೈತನಿಂದ ಗರಿಷ್ಠ 15ಕ್ವಿಂಟಲ್ ವರೆಗೆ ಕೊಬ್ಬರಿ ಖರೀದಿಗೆ ಅವಕಾಶವಿದೆ. ಬೆಳೆ ಪ್ರತಿ ಕ್ವಿಂಟಲ್ ಗೆ 12 ಸಾವಿರ ರೂ. ಜೊತೆಗೆ ರಾಗಿ ಖರೀದಿಗೂ ರಾಜ್ಯ ಸರಕಾರ ಮುಂದಾಗಿದೆ.

ಕೊಬ್ಬರಿ ಖರೀದಿ ವಿಷಯವಾಗಿ ಸಂಸತ್ ನಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಧ್ವನಿ ಎತ್ತಿದ್ದರು. 90 ವರ್ಷ ದಾಟಿರುವ ಹಿರಿಯ ರಾಜಕಾರಣಿ ಲೋಕಸಭೆಯಲ್ಲಿ ಕೊಬ್ಬರಿ ಖರೀದಿ ವಿಷಯವನ್ನು ಪ್ರಸ್ತಾಪಿಸಿದ್ದರು. ಇನ್ನು ವಿಧಾನ ಸಭೆಯಲ್ಲೂ ಹಳೆ ಮೈಸೂರು ಭಾಗದ ಶಾಸಕರು, ಮಂತ್ರಿಗಳು ಸಹ ಕೊಬ್ಬರಿ ಖರೀದಿ ವಿಚಾರವನ್ನು ಚರ್ಚಿಸಿದರು. ಪರಿಣಾಮವಾಗಿ ಇವತ್ತು ಅದರ ಫಲ ಕಾಣುತ್ತಿದೆ.

ಇದೆಲ್ಲವನ್ನು ಗಮನಿಸಿದರೆ ಉತ್ತರ ಕರ್ನಾಟಕದ ನಾಯಕರಿಗೆ ತಮ್ಮ ಭಾಗದ ರೈತರ ಬಗ್ಗೆ ಯಾಕೆ ಉದಾಸೀನ ಎನ್ನುವ ಪ್ರಶ್ನೆ ಎದುರಾಗುತ್ತದೆ. ಬರದಿಂದ ಕೆಂಗಟ್ಟಿರುವ ರೈತರ ನೆರವಿಗೆ ಉತ್ತರದ ನಾಯಕರು ಮುಂದಾಗದಿರುವುದು ಮತ್ತೆ ಮತ್ತೆ ಸ್ಪಷ್ಟವಾಗುತ್ತಿದೆ. ಮುಂಗಾರು– ಹಿಂಗಾರು ಕೈಕೊಟ್ಟು ರಾಜ್ಯದಲ್ಲಿ ಬರ ಆವರಿಸಿದ್ದರೂ ಉತ್ತರ ಕರ್ನಾಟಕ ಭಾಗದ ರೈತರ ಸಮಸ್ಯೆ ಬಗ್ಗೆ ಇಲ್ಲಿನ ಜನಪ್ರತಿನಿಧಿಗಳು ವಿಧಾನಸಭೆಯಲ್ಲಿ, ಲೋಕಸಭೆಯಲ್ಲಿ ಧ್ವನಿ ಎತ್ತದಿರುವುದು ಅತ್ಯಂತ ನೋವಿನ ಸಂಗತಿ.

ಸಂಸತ್ ಅಧಿವೇಶನದಲ್ಲಿ ಒಂದೇ ಒಂದು ಪ್ರಶ್ನೆ ಕೇಳದೆ, ಚರ್ಚೆಯಲ್ಲಿ ಭಾಗವಹಿಸದೇ ಇರುವ ನಾಯಕರು ನಮ್ಮ ಮಧ್ಯೆ ಇದ್ದಾಗ ನಮ್ಮ ಸಮಸ್ಯೆಗಳು ಹೇಗೆ ಪರಿಹಾರವಾಗಲು ಸಾಧ್ಯ ಎನ್ನುವ ಪ್ರಶ್ನೆ ಎದುರಾಗುತ್ತದೆ. ಆದರೆ ವಿಧಾನಸಭೆಯಲ್ಲಿ ಚರ್ಚೆ ಮಾಡಲು ಸಾಕಷ್ಟು ಅವಕಾಶವಿದೆ. ಉತ್ತರ ಕರ್ನಾಟಕ ಭಾಗದ ಅನೇಕ ಜನ ಮಂತ್ರಿಗಳಿದ್ದಾರೆ. ಹಿರಿಯ ಶಾಸಕರಿದ್ದಾರೆ. ಆದರೂ ಒಮ್ಮೆಯೂ ಉತ್ತರ ಕರ್ನಾಟಕ ರೈತರ ಅಥವಾ ರೈತರ ಉತ್ಪನ್ನಗಳ ಬಗ್ಗೆ ಚರ್ಚೆ ಆಗಿದ್ದು ಕಡಿಮೆ.

ಎಲ್ಲೊ ಒಂದಿಬ್ಬರು ಶಾಸಕರು ಬೆಂಬಲ ಬೆಲೆ ಘೋಷಣೆ ಮಾಡಿ, ಖರೀದಿ ಕೇಂದ್ರ ಆರಂಭ ಮಾಡಿ ಎಂದು ಒತ್ತಾಯ ಮಾಡಿದರೆ, ಕಾಟಾಚಾರಕ್ಕೆ ಬೆಂಬಲ ಬೆಲೆ ಖರೀದಿ ಕೇಂದ್ರ ಆರಂಭವಾಗುತ್ತದೆ. ಉತ್ತರ ಕರ್ನಾಟಕದ ಬಿಳಿಜೋಳ ಖರೀದಿ ಕೇಂದ್ರ ಆರಂಭಿಸಲಾಗಿದೆ. ಆದರೆ ಬೆಲೆ ಮಾತ್ರ ಅತ್ಯಂತ ಕಡಿಮೆ.

ಹೀಗಾಗಿ ರೈತರು ಮಾರುಕಟ್ಟೆಯಲ್ಲೆ ತಮ್ಮ ಉತ್ಪನ್ನ ಮಾರಾಟ ಮಾಡುತ್ತಿದ್ದಾರೆ. ಉತ್ತರದ ಧ್ವನಿ ಗಟ್ಟಿಯಾಗಿಲ್ಲ ಎನ್ನುವ ಕಾರಣಕ್ಕೆ ಉ.ಕ. ಭಾಗದ ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗುತ್ತಿಲ್ಲ. ಇನ್ನಾದರೂ ಉತ್ತರದ ನಾಯಕರು ಉದಾಸೀನ ಮಾಡದೆ, ನಮ್ಮ ರೈತರ ನೆರವಿಗೆ ಮುಂದಾಗಬೇಕಿದೆ.

# ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಲಕ್ಷ್ಮೇಶ್ವರ ಹಾಗೂ 110 ಕೆವ್ಹಿ ಬೆಳ್ಳಟ್ಟಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಫೆ.22ರ ಮುಂಜಾನೆ 9 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

110 ಕೆವ್ಹಿ ಲಕ್ಷ್ಮೇಶ್ವರ ಹಾಗೂ 110 ಕೆವ್ಹಿ ಬೆಳ್ಳಟ್ಟಿ ಉಪಕೇಂದ್ರಗಳಿಂದ ಪೂರೈಕೆಯಾಗುವ 110 ಕೆವ್ಹಿ ಬೆಳ್ಳಟ್ಟಿ–ಬಾಗೇವಾಡಿ ವಿದ್ಯುತ್ ಮಾರ್ಗ, 33 ಕೆವ್ಹಿ ಎಮ್ಎಮ್ಸಿಎಲ್ ಗಾಳಿಯಂತ್ರ ಘಟಕ ಮತ್ತು 33 ಕೆವ್ಹಿ ಸೊಮೆಶ್ವರ ಸ್ಪಿನ್ನಿಂಗ ಮಿಲ್ಲ್, ಸೋಲಾರ್–1, ಸೋಲಾರ್–2 ಹಾಗೂ 110 ಕೆವ್ಹಿ ಎನಾರಕಾನ, 110 ಕೆವ್ಹಿ ಆದಿತ್ಯ ಬಿರ್ಲಾ ಸೋಲಾರ, 33 ಕೆವ್ಹಿ ಜಾಲವಾಡಗಿ ನೀರು ಸರಬರಾಜು ಉಪಕೇಂದ್ರ, 33 ಕೆವ್ಹಿ ಸೂರಣಗಿ ಉಪಕೇಂದ್ರ ಮತ್ತು 33 ಕೆವ್ಹಿ ಹೊಳೆಇಟಗಿ ಉಪಕೇಂದ್ರಗಳಿಂದ ಪೂರೈಸ್ಪಡುವ ಎಲ್ಲಾ ನಗರ, ಕೈಗಾರಿಕಾ, ಕುಡಿಯುವ ನೀರು ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಯಾರು ಶ್ರೀಮಂತರು...



ಹೊಟ್ಟೆ ತುಂಬಾ ಊಟ, ಕಣ್ಣು ತುಂಬಾ ನಿದ್ದೆ, ಮನಸ್ಸಿನ ತುಂಬಾ ಸಂತೋಷ ತುಂಬಿರುವವರೇ ಶ್ರೀಮಂತರು. ಅಲ್ಪ ತೃಪ್ತಿಯನ್ನು ಪಡುವವರೇ ಶ್ರೀಮಂತರು. ಹೆಚ್ಚು ವಿಚಾರ ಮಾಡದೇ ಅಗತ್ಯಕ್ಕೆ ವಿಚಾರ ಮಾಡುವವರೇ ಶ್ರೀಮಂತರು. ಊಟ ಮಾಡುವಾಗ ಊಟವನ್ನು ಆನಂದದಿಂದ, ಸಂತೃಪ್ತಿಯಿಂದ ಊಟ ಸವಿಯುವವರೇ ಶ್ರೀಮಂತರು. ಗುಡಿಸಲಲ್ಲಾದರೂ ಪರವಾಗಿಲ್ಲ ಚಿಕ್ಕ ಮನೆಯಾದರೂ ಪರವಾಗಿಲ್ಲ, ಮನತುಂಬಿ ನಗುವವರೇ ಶ್ರೀಮಂತರು. ಸಾದಾ ಸೀದಾ ಎಲ್ಲರ ಜೊತೆ ಹೊಂದಿಕೊಳ್ಳುವವರು ಶ್ರೀಮಂತರು. ಮಕ್ಕಳ ಜೊತೆಗೆ ಮನ ತುಂಬಿ ಬೆರೆತು ಖುಷಿಪಡುವವರು ಶ್ರೀಮಂತರು. ಭೇದ–ಭಾವವಿಲ್ಲದೆ ಎಲ್ಲರೂ ನಮ್ಮವರೆಂದು ಬೆರೆತು ನಕ್ಕು ನಲಿದಾಡುವವರೇ ಶ್ರೀಮಂತರು.

ಹೆಚ್ಚು ಆಸೆ ಪಡದೆ ಇರುವುದರಲ್ಲೇ ತೃಪ್ತಿ ಹೊಂದಿಕೊಳ್ಳುವವರು ಶ್ರೀಮಂತರು. ನಾನೇ ಎಲ್ಲರಿಗಿಂತ ಚಿಕ್ಕವ, ನಾನೇ ಅದೃಷ್ಟವಂತ ಎಂದುಕೊಳ್ಳುವವರೇ ದೊಡ್ಡ ಶ್ರೀಮಂತರು. ಮನತುಂಬ ನಗು, ಉತ್ತಮ ಆರೋಗ್ಯ, ಮಾಡುವ ಕೆಲಸದಲ್ಲಿ ತೃಪ್ತಿ, ಅದು ದಿನಕ್ಕೆ ಹತ್ತು ರೂಪಾಯಿ ದುಡಿದರೂ ಪರವಾಗಿಲ್ಲ. ಯಾರಿಗೆ ತಮ್ಮ ದುಡಿಮೆಯಲ್ಲಿ ತೃಪ್ತಿ ಇರುತ್ತದೆಯೋ ಅವರೇ ಅತಿ ದೊಡ್ಡ ಶ್ರೀಮಂತರು. ಇವರಿಗಿಂತ ಶ್ರೀಮಂತರು ಜಗಕೆ ಬೇಕೇ?



–ಮಂಜುಳಾ ಇಟಗಿ.
ಯೋಗ ಶಿಕ್ಷಕಿ, ಮುಂಡರಗಿ.

### ಆರರ ಪೋರಿ ಸಾಕ್ಷಿ ದೇವರಡ್ಡಿ ರಚಿಸಿದ 'ಸಾಕ್ಷಿ ಪದ್ಯಗಳು' ಕೃತಿ ಲೋಕಾರ್ಪಣೆ

# ಮೊಗ್ಗಿನ ಮನಸಿನ ಮುಗ್ಧತೆಯ ಪದ್ಯಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳು ಬಾಲ್ಯದಲ್ಲಿ ಸಾಕಷ್ಟು ಅನುಭವಗಳ ಮೂಟೆಯನ್ನು ಹೊತ್ತುಕೊಂಡು ಸಾಗುತ್ತಾರೆ. ಸೂಕ್ತ ಅವಕಾಶ ಮತ್ತು ಪ್ರೋತ್ಸಾಹ ದೊರೆತಾಗ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯಾಗಿ ಹೊರಹೊಮ್ಮುತ್ತದೆ. ಈ ದಿಸೆಯಲ್ಲಿ ಸಾಕ್ಷಿ ದೇವರಡ್ಡಿ ತನ್ನ ಅನುಭವಗಳನ್ನು ಪುಟ್ಟ ಪುಟ್ಟ ಪದ್ಯದಲ್ಲಿ ಹೂರಣವಾಗಿ ತುಂಬಿ ಪದಗಳ ತೋರಣ ಕಟ್ಟಿದ್ದಾಳೆ. ಮೊಗ್ಗಿನ ಮನಸಿನ ಮುಗ್ಧತೆಯು ಹೂಗನಸಿನ ಪದ್ಯಗಳಿಗೆ ಸಾಕ್ಷಿಯಾಗಿದೆ ಎಂದು ಧಾರವಾಡ ಆಕಾಶವಾಣಿಯ ಮುಖ್ಯಸ್ಥ ಬಸು ಬೇವಿನಗಿಡದ ನುಡಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಹಾಗೂ ಚಿಲಿಪಿಲಿ ಪ್ರಕಾಶನ ಧಾರವಾಡದಿಂದ ತೋಂಟದ ಗದುಗಿನ ಸಿದ್ಧಲಿಂಗಶ್ರೀಗಳ ಕನ್ನಡ ಭವನದಲ್ಲಿ ಜರುಗಿದ ಕುಮಾರಿ ಸಾಕ್ಷಿ ರವಿ ದೇವರಡ್ಡಿ ಅವರ 'ಸಾಕ್ಷಿ ಪದ್ಯಗಳು' ಕೃತಿಯ ಲೋಕಾರ್ಪಣೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಸಾಕ್ಷಿಯ ಕವಿತೆಗಳು ಮಕ್ಕಳ ಆಲೋಚನೆಯ ಪ್ರತಿನಿಧಿಯಾಗಿವೆ. ಇಂದಿನ ಕಾನ್ವೆಂಟ್ ಸಂಸ್ಕೃತಿಯ ಶಿಕ್ಷಣ ಮಕ್ಕಳ ಬಾಲ್ಯವನ್ನು ಕಿತ್ತು ತಿನ್ನುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ಮಗು ಒಂದಿಷ್ಟು ತಿಳುವಳಿಕೆ ಬಂದ ನಂತರ ಕಾಣುವ, ನೋಡುವ, ಸ್ಪರ್ಶಿಸುವ, ಅನುಭವಿಸುವ ತನ್ನದೇ ಆದ ಭಾವನೆಗಳನ್ನು ವ್ಯಕ್ತಪಡಿಸುವುದು ಸಹಜ. ಅವುಗಳನ್ನು ಅಕ್ಷರ ರೂಪಕ್ಕೆ ಇಳಿಸಿದಾಗ ಸಿಗುವ ನೋಟವೇ ಸಾಕ್ಷಿ ಪದ್ಯಗಳು. ಥೇಟ್ ಆಗತಾನೆ ಹೊಲದಿಂದ ಕಿತ್ತು ತಂದ ಸಾವಯವ ತಾಜಾ ತರಕಾರಿ ತಿಂದ ಅನುಭವ ಓದುಗನಿಗೆ ಆಗುವುದು. ಅಪರೂಪದ ಪ್ರತಿಭೆ ಸಾಕ್ಷಿ ಇಂಥ ಪ್ರತಿಭೆಯ ಪುಟ್ಟ ಕೃತಿಯನ್ನು ಚಿಲಿಪಿಲಿ ಪ್ರಕಾಶನ ಹೆಮ್ಮೆಯಿಂದ ಪ್ರಕಟಿಸಿ ನಿಮ್ಮ ಕೈಗೆ ಇಟ್ಟಿದೆಯೆಂದರು.




ಡೋಣಿಯ ನಂದಿವೇರಿ ಸಂಸ್ಥಾನಮಠದ ಪೂಜ್ಯ ಶಿವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತ, ಕಾವ್ಯ ಕಟ್ಟುವುದು ವ್ಯಕ್ತಿಯ ಮನಸ್ಸಿನ ಅಗಾಧತೆಯಾಗಿದ್ದು, ಸಂಸ್ಕಾರ ಹೊಂದಿ ಅಕ್ಷರ ರೂಪವನ್ನು ತಾಳಿ ಲಾಲಿತ್ಯವನ್ನು ಪಡೆಯುತ್ತದೆ. ಮನಸ್ಸು ಸೃಜನಶೀಲವಾಗಿದ್ದರೆ ಕಾವ್ಯ ಹುಟ್ಟುತ್ತದೆ. ನಮ್ಮ ಮನೆಗಳಲ್ಲಿ ಪುಸ್ತಕದ ವಾತಾವರಣ ತುಂಬ ಕಡಿಮೆಯಾಗಿದೆ. ದೃಶ್ಯ ಮಾಧ್ಯಮದ ಭರಾಟೆಯಲ್ಲಿ ಪುಸ್ತಕಗಳು ಕಳೆದುಹೋಗುತ್ತಿವೆ. ಮಕ್ಕಳು ಓದುವ ಹವ್ಯಾಸದಿಂದ ದೂರವಾಗುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಮಕ್ಕಳ ಸಾಹಿತಿ ನಾಗರಾಜ ಹುಡೇದ ಸಾಕ್ಷಿ ಪದ್ಯಗಳ ಪುಸ್ತಕಾವಲೋಕನ ಮಾಡಿ, ಸಾಕ್ಷಿ ಗೀಚಿದ ಚಿತ್ರಗಳಿಂದ ಸಾಹಿತ್ಯ ಹೊರಹೊಮ್ಮಿದೆ. ಅಭಿವ್ಯಕ್ತಿಗೆ ಮಾಧ್ಯಮವಾಗಿ ಚಿತ್ರಗಳನ್ನು ಬಳಸಿಕೊಂಡು ನಂತರ ಮಾತು ಬಂದಾಗ ಅಕ್ಷರ ರೂಪಕ್ಕೆ ಇಳಿಸಿ ರಚಿಸಿದ ಪದ್ಯಗಳು ಇವಾಗಿವೆಯೆಂದರು.

ಕು. ಸಾಕ್ಷಿ ಮಾತನಾಡಿ, ನಾನು ಶಾಲೆಯಿಂದ ಮನೆಗೆ ಬಂದಾಗ ನನ್ನ ಅಪ್ಪ–ಅಮ್ಮ ಇವತ್ತ ಶಾಲೆಯಲ್ಲಿ ಯಾವ ಆಟ ಆಡಿದಿ, ಹೊಸ ಕಥೆ, ಹಾಡು ಶಾಲೆಯಲ್ಲಿ ಹೇಳಿದರಾ ಎಂದು ಕೇಳುತ್ತಿದ್ದರು. ನಾನು ಹೇಳುತ್ತ ಹೋಗುತ್ತಿದ್ದೆ. ಗುಬ್ಬಚ್ಚಿ ಗೂಡು, ಸುಧಾ ಪತ್ರಿಕೆ ಓದುವುದನ್ನ ರೂಢಿ ಮಾಡಿಕೊಂಡೆ. ಹಾಗೆ ಚಿತ್ರ, ಕವಿತೆ ಬರೆಯುತ್ತಿದ್ದೆ. ಅವೆಲ್ಲವೂ ಕೂಡಿಸಿ ಪುಸ್ತಕ ಮಾಡಿದೆ ಎಂದು ತನ್ನ ಮಾತುಗಳಲ್ಲಿ ಹೇಳಿದಳು.

ಸಾಕ್ಷಿ ಪದ್ಯಗಳ ಕಾರ್ಯಕ್ರಮ ಕುರಿತು ಸಂತೋಷ ಅಂಗಡಿ ಹಾಗೂ ರವಿ ದೇವರಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರೊ. ಚಂದ್ರಶೇಖರ ವಸ್ತ್ರದ, ಪ್ರೊ. ಕೆ.ಎಚ್. ಬೇಲೂರ, ಪ್ರೊ.ಅನ್ನದಾನಿ ಹಿರೇಮಠ, ಡಿ.ಎಸ್. ಬಾಪುರೆ, ಬಸವರಾಜ ಗಣಪ್ಪನವರ, ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ, ಡಾ. ರಾಜಶೇಖರ ದಾನರಡ್ಡಿ, ರಾಜೇಂದ್ರ ಬರದ್ವಾಡ, ಶ್ರೀಕಾಂತ ಬಡ್ಡೂರ, ಕಿಶೋರಬಾಬು ನಾಗರಕಟ್ಟಿ, ಡಾ. ರಾಜೇಂದ್ರ ಗಡಾದ, ಸಿ.ಕೆ.ಎಚ್.ಶಾಸ್ತ್ರಿ(ಕಡಣಿ), ಈರನಗೌಡ ಮಣಕವಾಡ, ಎ.ಎಸ್.ಮಕಾನದಾರ, ಅನಂತಮೋಹನ ಭಟ್, ಜಯದೇವ ಭಟ್, ಅಜಿತ ಘೋರ್ಪಡೆ, ಸುರೇಶ ಕುಂಬಾರ, ಆರ್.ಡಿ. ಕಪ್ಪಲಿ, ಪ್ರ.ತೊ. ನಾರಾಯಣಪುರ, ಬಿ.ಎಸ್ ಹಿಂಡಿ, ರತ್ನಕ್ಕ ಪಾಟೀಲ, ಪ್ರೊ. ಶಕುಂತಲಾ ಸಿಂಧೂರ, ಜ್ಯೋತಿ ಹೇರಲಗಿ, ಶಿಲ್ಪಾ ಮ್ಯಾಗೇರಿ, ಆರ್.ವಿ. ಮ್ಯಾಗೇರಿ, ಗೀತಾ ಬಂಡಿ, ಶಾರದಾ ಬಾಣದ, ನೀಲಮ್ಮ ಅಂಗಡಿ, ಯು.ಎಸ್. ಕಣವಿ, ರಕ್ಷಿತಾ ಎಸ್.ಗಿಡ್ನಂದಿ, ಅನಸೂಯಾ ಮಿಟ್ಟಿ, ಎಂ.ಎಚ್. ಸವದತ್ತಿ, ಸಿ.ಎಂ. ಮಾರನಬಸರಿ, ಶಂಕರಗೌಡ ಪಾಟೀಲ, ಅಶೋಕ ಸತರೆಡ್ಡಿ, ಷಡಕ್ಷರಿ ಮೆಣಸಿನಕಾಯಿ, ಎಚ್.ಟಿ. ಸಂಜೀವಸ್ವಾಮಿ, ಎಂ.ಎಸ್. ಅಸುಂಡಿ, ಕೊಟ್ರೇಶ ಜವಳಿ, ಕಳಕಪ್ಪ ಜಲ್ಲಿಗೇರಿ, ಆಯ್.ವಾಯ್. ಸಾಳೆರ, ವಾಸಪ್ಪ ಸಾಳೆರ, ಗೀತಾ ಲಿಂ.ಪಾಟೀಲ, ರಾಜು ದಿಂಡೂರ, ರಾಜಶೇಖರ ಕರಡಿ, ಎಚ್.ವಿ. ಮಳಲಿ, ಡಾ. ಎ.ಎಲ್. ದೇಸಾಯಿ, ಎಸ್.ವಿ. ಕುಂದಗೋಳ, ಬಸವರಾಜ ವಾರಿ, ಡಾ. ಲಿಂಗಯ್ಯ ಅರವಟಗಿಮಠ, ಲಿಂಗರಾಜ ಪಾಟೀಲ, ನಿರ್ಮಲಾ ಪಾಟೀಲ, ಆರ್.ಎಸ್. ಕುಂದಗೋಳ, ಅಮರೇಶ ರಾಂಪುರ ಉಪಸ್ಥಿತರಿದ್ದರು.

ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮಕ್ಕಳು ಮೂಲತಃ ಸೃಜನಶೀಲರು. ಸೂಕ್ತ ಮಾರ್ಗದರ್ಶನ ಮತ್ತು ಅವಕಾಶಗಳು ಮಕ್ಕಳನ್ನು ಸೃಜನಶೀಲವಾಗಿಸಬಲ್ಲವು. ಆದರೆ ಶಾಲೆಗಳಿಂದು ಅಂಕ ಗಳಿಕೆಯ ತಾಣಗಳಾಗಿವೆ. ಮಕ್ಕಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಶಾಲೆ ಮತ್ತು ಮನೆ ಒದಗಿಸಬೇಕೆಂದರು.

ನೇತ್ರಾ ಬಂಡಿ ಪ್ರಾರ್ಥಿಸಿದರು. ಸೌಮ್ಯ ಬೈಲಪ್ಪನವರ ನಿರೂಪಿಸಿದರು. ಗೌರವ ಕಾರ್ಯದರ್ಶಿ ಶಿವಾನಂದ ಗಿಡ್ನಂದಿ ಸ್ವಾಗತಿಸಿದರು. ಶಿಕ್ಷಕ ಪಿ.ಟಿ. ಬೈಲಪ್ಪನವರ ವಂದಿಸಿದರು.

# ಕಲಾವಿದ ಜಾಕೀರಹುಸೇನರಿಗೆ ಎಸ್.ಹೆಚ್. ರಜಾ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಆಂಧ್ರಪ್ರದೇಶ ಸ್ಟೇಟ್ ಕ್ರಿಯೇಟಿವಿಟಿ ಆ್ಯಂಡ್ ಕಲ್ಚರ್ ಕಮಿಷನ್, ಕ್ರಿಯೇಟಿವಿಟಿ ಫೈನ್ ಆರ್ಟ್ ಅಕಾಡೆಮಿ ಇಂಡಿಯಾ ಆರ್ಟ್ ಫಾಸ್ಟಿವಲ್ ಅಮರವಾತಿ ಗುಂಟೂರು ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 18ನೇ ವರ್ಷದ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರಿಗೆ ಕಲಾ ಪ್ರದರ್ಶನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸ್ಪರ್ಧೆಯಲ್ಲಿ ಗದಗ ಜಿಲ್ಲೆಯ ಯುವ ಚಿತ್ರಕಲಾವಿದ ಡಾ. ಜಾಕೀರಹುಸೇನ ಎಂ.ಕೊರ್ಲಹಳ್ಳಿ ರಚಿಸಿರುವ ಚಾರ್ಕೋಲ್ ಮಾಧ್ಯಮದ 'ಅಂತಿಮ ಕ್ಷಣ ಹಾಗೂ ಮುಖಗಳು' ಎಂಬ ಶೀರ್ಷಿಕೆಯ ಕಲಾಕೃತಿಗೆ ನಗದು ಪುರಸ್ಕಾರದೊಂದಿಗೆ ಪ್ರಸಿದ್ಧ ಕಲಾವಿದ ಎಸ್.ಎಚ್. ರಜಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ವೇದಿಕೆಯಲ್ಲಿ ಸಿಇಓ ಆಂಧ್ರಪ್ರದೇಶ ಸ್ಟೇಟ್ ಕ್ರಿಯೇಟಿವಿಟಿ ಅಂಡ್ ಕಲ್ಚರ್ ಕಮಿಷನರ್ ರೇಗುಲ ಮಲ್ಲಿಕಾರ್ಜುನ್ ರಾವ್, ಕ್ರಿಯೇಟಿವಿಟಿ ಫೈನ್ ಆರ್ಟ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಡಾ. ಕೆ.ಪಿ. ಬಾಬು, ಸಂಸ್ಥೆಯ ಉಪಾಧ್ಯಕ್ಷೆ ಕೆ.ಸುನಿತಾ, ಹೈದರಾಬಾದ್ ಆರ್ಟ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಜಿ.ವೈ. ಗರಿ ಮತ್ತು ಆಂಧ್ರಪ್ರದೇಶ ಅಮರಾವತಿ ಹೈಕೋರ್ಟ್ ನ್ಯಾಯಾಧೀಶರಾದ ರಾಮಕೃಷ್ಣ ಪ್ರಸಾದಗಾರು ಹಾಗೂ ಹೈದರಾಬಾದಿನ ಹಿರಿಯ ಕಲಾವಿದ ಸಿ.ನರಸಪ್ಪಾ, ಮೊಹಮ್ಮದ್ ಉಸ್ಮಾನ್‌ಖಾನ, ಕೆ. ಬಾಲಯೋಗಿ, ಕೆ. ಸುಬ್ರಯ್ಯ, ಎಲ್. ಆರ್. ವೆಂಕಟರಾಮನ್ ಹಾಗೂ ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.

ಸಾಧನೆಗೈದ ಕಲಾವಿದ ಡಾ. ಜಾಕೀರ ಹುಸೇನರನ್ನು ಎಮ್‌ಕೆಕೆಎಫ್ ಟ್ರಸ್ಟ್ ಅಧ್ಯಕ್ಷರು, ಸರ್ವ ಸದಸ್ಯರು, ಸಿಬ್ಬಂದಿ ವರ್ಗ, ಗದಗಿನ ಚಿತ್ರಕಲಾ ಬಳಗದವರು ಅಭಿನಂದಿಸಿದ್ದಾರೆ.



# ಇತಿಹಾಸ ರಚಿಸಿ ಸಾಧಕರಾಗಿ

■ ವಿಜಯಸಾಕ್ಷಿ ಸುದ್ದಿ, ಗದಗ

ಡಾ. ಅಂಬೇಡ್ಕರರು ಹೇಳುವ ಹಾಗೆ ಇತಿಹಾಸ ತಿಳಿದವರು ಮಾತ್ರ ಇತಿಹಾಸ ರಚಿಸುತ್ತಾರೆ. ಆದ್ದರಿಂದ ಮಕ್ಕಳು ಇತಿಹಾಸ ತಿಳಿದು ಸಾಧಕರಾಗಿ ಇತಿಹಾಸ ರಚಿಸುವಂತಾಗಬೇಕು ಎಂದು ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಹೇಳಿದರು.

ಅವರು ವಿದ್ಯಾವರ್ಧಕ ಸಂಸ್ಥೆಯ ಸಿ.ಎಸ್. ಪಾಟೀಲ ಸಮೂಹ ಶಾಲೆಗಳ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪಾಲಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪಾಲಕರು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕು. ಮಕ್ಕಳಲ್ಲಿ ಆದರ್ಶ ಗುಣಗಳನ್ನು ಬಿತ್ತಬೇಕು. ಅಂದಾಗ ನಮ್ಮ ನಾಡು ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ವೀರನಗೌಡ ಪಾಟೀಲ ವಹಿಸಿದ್ದರು.

ಸಂಸ್ಥೆಯ ಉಪಾಧ್ಯಕ್ಷ ಲಿಂಗರಾಜ ಪಾಟೀಲ, ನಿಂಗನಗೌಡ ಹಿರೇಮನಿಪಾಟೀಲ, ರಾಜೀವಗಾಂಧಿ ಪೊಲೀಸ್ ಠಾಣೆಯ ಪಿ.ಎಸ್.ಐ. ವಿಜಯಕುಮಾರ ತಳವಾರ, ಆಡಳಿತ ಮಂಡಳಿಯ ಸದಸ್ಯೆ ಗೀತಾಬಾಯಿ ಪಾಟೀಲ ಮಾತನಾಡಿದರು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಆರ್.ಎಲ್. ಹಂಸನೂರರವರು ಸಂವಿಧಾನ ಪೂರ್ವ ಪೀಠಿಕೆ ಬೋಧಿಸಿದರು. ಬಾಲಕಿಯರ ಪ್ರೌಢಶಾಲಾ ಮುಖ್ಯಾಧ್ಯಾಪಕ ಎಸ್.ಜಿ. ಕೋಲ್ಮಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಮ್. ಆರ್. ನಾಯಿಕ ಶಾಲೆಯ ವರದಿ ವಾಚಿಸಿದರು.

ಎನ್.ವಿ. ಪಾಟೀಲ ಸ್ವಾಗತಿಸಿದರು. ವಸ್ತುಪ್ರದರ್ಶನವನ್ನು ಆಯ್.ಎಸ್. ಗೌಡರ, ವಾಯ್. ವಾಯ್. ಉಣಕಲ್ ಹಾಗೂ ಆರ್. ಕೆ. ಜಮಖಂಡಿ ನಿರ್ವಹಿಸಿದರು. ವೇದಿಕೆ ಕಾರ್ಯಕ್ರಮವನ್ನು ಜಿ.ಎಸ್. ಪಾಟೀಲ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಎಸ್.ಎಮ್. ತಳವಾರ, ಕೆಂಗುಡ್ಡಪ್ಪನವರ, ಎಚ್.ಪಿ. ಹಿರೇಮಠ, ಎಸ್.ಎಸ್. ಗುಜಮಾಗಡಿ ನಡೆಸಿಕೊಟ್ಟರು.

ನಿವೃತ್ತ ಮುಖ್ಯಾಧ್ಯಾಪಕ ಎನ್.ವಿ. ಜೋಶಿ, ಎನ್.ಎಸ್. ಹಂಜಗಿ, ಬಿ.ಎಸ್. ಹೊನಗುಡಿ, ಎಚ್.ಪಿ. ಹಿರೇಮಠ, ವಿದ್ಯಾರ್ಥಿ ಪ್ರತಿನಿಧಿಗಳಾದ ಪ್ರೀತಮ ಹಡಪದ, ಅಶ್ವಿನಿ ಬಾರಕೇರ, ಮೇಘಾ ಕೊಪ್ಪದ, ವಿಜಯಕುಮಾರ ವೇದಿಕೆಯಲ್ಲಿದ್ದರು.



### ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿಹಾಜಿ ಸರ್ಫರಾಜ ಅಹ್ಮದ ಉಮಚಗಿ

# ವಿದ್ಯಾ ಸಂಸ್ಥೆಗೆ ಹೆಮ್ಮೆ ತರುವಂತೆ ಅಧ್ಯಯನ ಮಾಡಿ



■ ವಿಜಯಸಾಕ್ಷಿ ಸುದ್ದಿ, ಗದಗ

ಎಸ್ಎಸ್ಎಲ್ಸಿ ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆಯನ್ನು ಎದುರಿಸಿ ಉನ್ನತ ದರ್ಜೆಯೊಂದಿಗೆ ತೇರ್ಗಡೆ ಹೊಂದುವ ಗುರಿಯನ್ನು ಇಟ್ಟುಕೊಳ್ಳಬೇಕು. ಕೇವಲ 10ನೇ ತರಗತಿಯಷ್ಟೇ ಅಲ್ಲದೆ, ಉನ್ನತ ಶಿಕ್ಷಣ ಪಡೆಯುವವರೆಗೂ ಅಭ್ಯಾಸ ಮಾಡಬೇಕು. ತಂದೆ–ತಾಯಿ , ಶಿಕ್ಷಕರು, ವಿದ್ಯಾಸಂಸ್ಥೆಗೆ ಹೆಮ್ಮೆ ತರುವಂತೆ ಅಧ್ಯಯನ ಮಾಡಬೇಕು ಎಂದು ಹಾಜಿ ಸರ್ಫರಾಜ ಅಹ್ಮದ ಎಸ್. ಉಮಚಗಿ ಕಿವಿಮಾತು ಹೇಳಿದರು.

ಇಲ್ಲಿನ ಆಂಗ್ಲೋ ಉರ್ದು ಬಾಲಕ/ಬಾಲಕಿಯರ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ 2023–24ನೇ ಸಾಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ, 2022–23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರವನ್ನು ವಿತರಿಸಿ ಅವರು ಮಾತನಾಡಿದರು.

ಡಿ.ಜಿ.ಎಂ. ಆಯುರ್ವೇದಿಕ್ ಕಾಲೇಜಿನ ಡಾ. ಎಂ.ಡಿ. ಸಾಮುದ್ರಿ ಮಾತನಾಡಿ, ವಿದ್ಯಾರ್ಥಿಗಳು ಸದಾ ಪುಸ್ತಕ ಓದುವ ಹವ್ಯಾಸವನ್ನು ಇಟ್ಟುಕೊಂಡು ತಮ್ಮ ಭವಿಷ್ಯವನ್ನು ಉಜ್ವಲಗಳಿಸಿಕೊಳ್ಳಬೇಕು. ಒಂದು ದೇಶ ಅಭಿವೃದ್ಧಿ ಹೊಂದಿದ ದೇಶವಾಗಬೇಕಾದರೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಉತ್ತಮವಾಗಿರಬೇಕು ಹಾಗೂ ಓದುವ ವಿದ್ಯಾರ್ಥಿಗಳು ಧನಾತ್ಮಕ ಚಿಂತನೆಯನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಸಾಬಿರಾ ತಡೋಲರವರು ಮಾತನಾಡುತ್ತಾ, ಈ ಶಾಲೆಯ ಶೈಕ್ಷಣಿಕ ವಾತಾವರಣ ಬಹಳ ಉತ್ತಮವಾಗಿದೆ. ವಿದ್ಯಾರ್ಥಿಗಳು ಇದರ ಲಾಭ ಪಡೆಯಬೇಕು ಎಂದರು.

ಕರಾಮುದ್ದಿನ ಸರವರ ಮಾತನಾಡಿ, ನಾನು ಈ ಶಾಲೆಯಲ್ಲಿಯೇ ಕಲಿತಿದ್ದು, ಇಲ್ಲಿಯ ಶಿಕ್ಷಣದಿಂದ ನನಗೆ ಭದ್ರ ಬುನಾದಿ ಸಿಕ್ಕಿದೆ. ಎಲ್ಲ ವಿದ್ಯಾರ್ಥಿಗಳು ಶ್ರಮಪಟ್ಟರೆ ಗುರಿ ಮುಟ್ಟಲು ಸಾದ್ಯ ಎಂದು ಹೆಳಿದರು.

ಸಂಸ್ಥೆಯ ನಿರ್ದೇಶಕ ಜನಾಬ. ಎ.ಎಂ. ಮುಲ್ಲಾ ಮಾತನಾಡಿ, ಮುಂಬರುವ ದಿನಗಳಲ್ಲಿ ಹೆಚ್ಚಿನ ವ್ಯಾಸಂಗ ಮಾಡಿ ಉನ್ನತ ಸ್ಥಾನಮಾನಗಳನ್ನು ಪಡೆಯಬೇಕು ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತಾಳ್ಮೆಯಿಂದ ಬರೆಯಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷ ಹಾಜಿ ಎ.ಎಂ. ಸೌದಾಗರ, ಕಾರ್ಯದರ್ಶಿ ಜನಾಬ ಎಂ.ಎಂ. ಶೇಖ, ಸದಸ್ಯರಾದ ಜನಾಬ ರಾಜೇಸಾಬ ಎಲ್.ಬಾಗಲಕೋಟ, ಜನಾಬ ಶಾನವಾಜ ಎಸ್.ಉಮಚಗಿ, ಜನಾಬ ಎ. ಎಂ. ಮುಲ್ಲಾ, ಜನಾಬ ಜಿಲಾನಿ ಬಿ. ಉಮಚಗಿ, ಜನಾಬ ಮಹ್ಮದಇಕ್ಬಾಲ ಎ.ಹಣಗಿ, ಜನಾಬ ಮಹ್ಮದಯೂಸುಫ ಎ.ನರಗುಂದ, ಆಂಗ್ಲೋ ಉರ್ದು ಬಾಲಕ/ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು, ಶಾಲಾ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎಲ್.ಆರ್. ಇಟಗಿಯವರು ಸ್ವಾಗತಿಸಿದರು. ವಿದ್ಯಾರ್ಥಿನಿ ಆಯಿಶಾಸಿದ್ದಿಕ ನವಲಗುಂದ ನಿರೂಪಿಸಿದರು. ಶಿಕ್ಷಕರಾದ ಝುಡ್.ಎ.ಮುಲ್ಲಾ, ಎಸ್.ಆಯ್. ನದಾಫ್ ಶಾಲಾ ವಾರ್ಷಿಕ ವರದಿ ವಾಚನ ಮಾಡಿದರು. ಹಮೀದ ಕನಕವಾಡ ವಂದಿಸಿದರು.

# ಸರ್ವಜ್ಞರ ವಚನಗಳು ಇಂದಿಗೂ ಪ್ರೇರಣೆ



■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತ್ರಿಪದಿಗಳ ಬ್ರಹ್ಮ ಎಂದೇ ಪ್ರಸಿದ್ಧಿಯಾಗಿರುವ ಸರ್ವಜ್ಞರು 16ನೇ ಶತಮಾನದಲ್ಲಿ ಜನಪ್ರಿಯ ವಚನ ಸಾಹಿತ್ಯದ ಮೂಲಕ ನಾಡಿನಾದ್ಯಂತ ಪ್ರಯಾಣಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದುತ್ತಾ, ತ್ರಿಪದಿ ವಚನ ಸಾಹಿತ್ಯದ ಮೂಲಕ ಜನರಲ್ಲಿ ಶಿಕ್ಷಣದ ಅರಿವು ಮೂಡಿಸಿದ ಮಹಾನ್ ಚೇತನರಾಗಿದ್ದರು ಎಂದು ತಹಸೀಲ್ದಾರ ಬಿ.ವಿ. ಗಿರೀಶ ಬಾಬು ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕಾಡಳಿತದ ವತಿಯಿಂದ ವಚನ ಶ್ರೇಷ್ಠ ಸರ್ವಜ್ಞರ 504ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜವು ತಮ್ಮ ವೃತ್ತಿಯೊಂದಿಗೆ ಸಾಮಾಜಿಕ–ಆರ್ಥಿಕವಾಗಿ ಮುನ್ನೆಲೆಗೆ ಬರಲು ಮಕ್ಕಳಿಗೆ ಶಿಕ್ಷಣವನ್ನು ನೀಡಿ ಪ್ರಜ್ಞಾವಂತರನ್ನಾಗಿ ಮಾಡಿದಾಗ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯ. ಸರ್ವಜ್ಞರ ವಚನಗಳು ಇಂದಿಗೂ ಪ್ರೇರಣೆಯಾಗಿದ್ದು, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು.

ತಾ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ಪ್ರಕಾಶ್, ತಾಲೂಕು ಕುಂಬಾರ ಸಮಾಜದ ಅಧ್ಯಕ್ಷ ಅಜ್ಜಪ್ಪ ಬಂಡ್ರಿ, ನೀಲಗುದ ವಿರಕ್ತ ಮಠದ ಚನ್ನಬಸವ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ಚನ್ನಬಸಪ್ಪ, ಈರಣ್ಣ ಕುಂಚೂರು, ಮಲ್ಲಪ್ಪ, ಗೂಳೆಪ್ಪ, ಹನುಮಂತಪ್ಪ ಪೂಜಾರ, ಸಣ್ಣ ಲಕ್ಕಪ್ಪ, ಕಲ್ಲಪ್ಪ, ಶ್ರೀಕಾಂತ, ಚಿದಾನಂದಪ್ಪ, ಪಕ್ಕೀರಪ್ಪ, ಶಿಕ್ಷಕರಾದ ಮೈಲಾರಪ್ಪ, ವೆಂಕಟೇಶ ಇತರರಿದ್ದರು.

### ಮಹದಾಯಿ ಹೋರಾಟಗಾರರ, ರೈತ ಮುಖಂಡರ ಸಭೆಯಲ್ಲಿ ಶಾಸಕ ಎನ್.ಎಚ್. ಕೋನರಡ್ಡಿ

# ಮಹದಾಯಿ ಯೋಜನೆ ಜಾರಿಗೆ ಬದ್ಧ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ಅಧ್ಯಕ್ಷತೆಯಲ್ಲಿ ಬುಧವಾರ ಮದ್ಯಾಹ್ನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳೆವಿಮೆ ಪರಿಹಾರ, ಬೆಳೆಪರಿಹಾರ, ಮಹದಾಯಿ ಯೋಜನೆ ಅನುಷ್ಠಾನ ಕುರಿತು ಮಹದಾಯಿ ಹೋರಾಟಗಾರರ ಹಾಗೂ ಜಿಲ್ಲೆಯ ರೈತ ಮುಖಂಡರ ಸಭೆ ಜರುಗಿತು.

ಸಭೆಯಲ್ಲಿ ರೈತ ಮುಖಂಡರು ಮಹದಾಯಿ ನಿರಾವರಿ ಯೊಜನೆ ಅನಷ್ಠಾನ, ಹೆಸ್ಕಾಂನಿಂದ ನಿರಂತರ ವಿದ್ಯುತ್ ಪೂರೈಕೆ, ಕುಂದುಗೋಳ ಭಾಗದ ರೈತರ ಜಮಿನುಗಳಲ್ಲಿ ಚಿಗರಿ ಹಾವಳಿ, ಬೆಳೆವಿಮೆ ಪರಿಹಾರ, ಮಧ್ಯಂತರ ಬೆಳೆವಿಮೆ ಪರಿಹಾರ, ಉತ್ತರ ಕರ್ನಾಟಕದ ಕೃಷಿ, ನೀರಾವರಿ, ರೈತರ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ರೈತ ಮುಖಂಡರಿಗೆ ಸಮಯಾವಕಾಶ ನೀಡಲು ಮನವಿ ಮಾಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ನವಲಗುಂದ ಶಾಸಕ ಎನ್. ಎಚ್. ಕೋನರಡ್ಡಿ ಮಾತನಾಡಿ, ಮಹದಾಯಿ ಯೋಜನೆ ಜಾರಿಗೆ ನಾನು ಒಬ್ಬ ರೈತನಾಗಿ, ಹೊರಾಟಗಾರನಾಗಿ ಬದ್ಧನಾಗಿದ್ದೇನೆ. ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಅನುದಾನ ನೀಡಿದ್ದಾರೆ. ಕೇಂದ್ರ ಸಚಿವರೂ ಆಗಿರುವ ನಮ್ಮ ಸಂಸದರೊಂದಿಗೆ ರೈತರ ಸಭೆ ಜರುಗಿಸಿ, ಕೇಂದ್ರದ ಸಹಕಾರದಲ್ಲಿ ಮಹದಾಯಿ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸೋಣ ಎಂದರು.

ಜಿಲ್ಲೆಯ ರೈತರಿಗೆ ಮಧ್ಯಂತರ ಬೆಳೆ ಪರಿಹಾರವಾಗಿ ಈಗಾಗಲೇ ಸುಮಾರು 70 ಕೋಟಿ ರೂ. ಬಿಡುಗಡೆ ಆಗಿದೆ. ಶೀಘ್ರದಲ್ಲಿ ಪೂರ್ಣ ಪ್ರಮಾಣದ ಬೆಳೆವಿಮೆ ಬಿಡುಗಡೆ ಆಗಲಿದೆ. ರಾಜ್ಯ ಸರ್ಕಾರ ಆರಂಭಿಕವಾಗಿ ರೂ. 2 ಸಾವಿರ ಬೆಳೆ ಪರಿಹಾರ ಹಣವನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡಿದೆ. ಕೇಂದ್ರದಿಂದ ಸುಮಾರು 17 ಸಾವಿರ ಕೋಟಿ ರೂ ಪರಿಹಾರ ಬಿಡುಗಡೆ ಆಗುವ ನಿರೀಕ್ಷೆ ಇದೆ. ಇದಕ್ಕೆ ರಾಜ್ಯದ ಪಾಲು ಸೇರಿಸಿ, ರೈತರಿಗೆ ಪರಿಹಾರ ಹಣ ನೀಡಲಾಗುವುದು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ದಿವ್ಯ ಪ್ರಭು ಮಾತನಾಡಿ, ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು, ಜನ ಜಾನುವಾರು ಮೇವು, ನೀರಿನ ಕೊರತೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ. ಗೋಶಾಲೆ ಪ್ರಾರಂಭವಾಗಿದೆ. ಜಿಲ್ಲೆಯ 14 ಸ್ಥಳಗಳಲ್ಲಿ ಮೇವು ಬ್ಯಾಂಕ್ ಆರಂಭಿಸಲು ಸ್ಥಳ ಗುರುತಿಸಲಾಗಿದೆ. ರೈತರಿಗೆ ಬ್ಯಾಂಕ್‌ಗಳಲ್ಲಿ ಆಗುತ್ತಿರುವ ಓಟಿಎಸ್ ಸಮಸ್ಯೆ ಪರಿಹರಿಸಲು ಲೀಡ್ ಬ್ಯಾಂಕ್ ಮ್ಯಾನೇಜರ್ ಮೂಲಕ ಎಲ್ಲಾ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲಾಗುವುದು. ರೈತರಿಗೆ ಯಾವುದೇ ಸಮಸ್ಯೆಗಳಿದ್ದಲ್ಲಿ ಜಿಲ್ಲಾಡಳಿತದ ಗಮನಕ್ಕೆ ತಂದರೆ, ಸಮಸ್ಯೆ ಪರಿಹರಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.



ಜಿಲ್ಲಾ ಪೊಲೀಸ್ ಅಧಿಕ್ಷಕ ಡಾ.ಗೋಪಾಲ್ ಬ್ಯಾಕೋಡ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮಟಕಾ, ಜೂಜು ಮತ್ತು ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುವುದನ್ನು ನಿಯಂತ್ರಿಸಲು ಎಲ್ಲ ಪೊಲೀಸ್ ಠಾಣೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪೊಲೀಸ್ ಬೀಟ್ ವ್ಯವಸ್ಥೆ ಹೆಚ್ಚಿಸಿ, ಚುರುಕುಗೊಳಿಸಲಾಗಿದೆ. ಯಾವುದೇ ಗ್ರಾಮಗಳಲ್ಲಿ ಅಪರಾಧ ಕೃತ್ಯಗಳು, ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿದ್ದರೆ ಜಿಲ್ಲಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲು ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಕಿರಣಕುಮಾರ ಸ್ವಾಗತಿಸಿ, ಸಭೆ ನಿರ್ವಹಿಸಿದರು. ಸಭೆಯಲ್ಲಿ ತೋಟಗಾರಿಕಾ ಇಲಾಖೆ ಉಪ ನಿರ್ದೇಶಕ ಕೆ.ಸಿ. ಬದ್ರಣ್ಣನವರ, ಕೃಷಿ ಇಲಾಖೆ ಉಪ ನಿರ್ದೇಶಕಿ ಜಯಶ್ರೀ ಹಿರೇಮಠ, ಎಸ್‌ಬಿಐ ವಿಮಾ ಕಂಪನಿಯ ಉಮೇಶ ಕಾಂತಾ, ವಿವಿಧ ತಾಲೂಕುಗಳ ಸಹಾಯಕ ಕೃಷಿ ನಿರ್ದೇಶಕರು, ರೈತ ಮುಖಂಡರಾದ ಶಂಕರ ಅಂಬಲಿ, ಲೋಕನಾಥ ಹೆಬಸೂರ, ಶಿವಣ್ಣ ಹೆಬ್ಬಳ್ಳಿ, ವೀರೇಶ ಸೊಬರದಮಠ, ಭಗವಂತಪ್ಪ ಪಟ್ಟಣದ, ದಿವಟೆ ಗೋಪಾಲ, ರಮೇಶ ಕೊರವಿ, ಬಸವರಾಜ ಜೋಗಪ್ಪನವರ, ಹಣಮಂತ ಬೂದಿಹಾಳ, ರಘುನಾಥ ನಡುವಿನಮನಿ, ಮಹೇಶ್ ಕುಲಕರ್ಣಿ, ಮಾಣಿಕ್ಯಮ್ಮ, ಮಲ್ಲಿಕಾರ್ಜುನ ಬಾಳನಗೌಡರ, ಎ.ಪಿ. ಗುರಿಕಾರ, ಸುಭಾಷಚಂದ್ರಗೌಡ ಪಾಟೀಲ ಸೇರಿದಂತೆ ಧಾರವಾಡ ಜಿಲ್ಲೆಯ ಎಲ್ಲ ತಾಲೂಕುಗಳ ರೈತ ಪ್ರತಿನಿಧಿಗಳು, ಮಹಿಳಾ ರೈತ ಪ್ರತಿನಿಧಿಗಳು ಭಾಗವಹಿಸಿ, ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮಹದಾಯಿ ಹಾಗೂ ಉತ್ತರ ಕರ್ನಾಟಕದ ರೈತರ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳೊಂದಿಗೆ ರೈತರ ಸಭೆ ನಡೆಸಲು ಚುನಾವಣಾ ಪೂರ್ವದಲ್ಲಿ ಅಥವಾ ಚುನಾವಣೆ ನಂತರ ಸಮಯ ನಿಗದಿಪಡಿಸಲು ಪ್ರಯತ್ನಿಸುತ್ತೇನೆ ಮತ್ತು ಮುಖ್ಯಮಂತ್ರಿಗಳ ಸಮಯಾವಕಾಶ ನೋಡಿಕೊಂಡು ನಾಳೆಯ ನವಲಗುಂದ ಕಾರ್ಯಕ್ರಮದಲ್ಲಿ ರೈತ ಮುಖಂಡರನ್ನು ಭೇಟಿ ಮಾಡಿಸಲು ಪ್ರಯತ್ನಿಸಲಾಗುವುದು. ಈ ಕುರಿತು ಕಾರ್ಯಕ್ರಮದಲ್ಲಿ ಸ್ಥಳ ಗುರುತಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಶಾಸಕ ಕೋನರಡ್ಡಿ ತಿಳಿಸಿದರು.

# ನಾಮ ಬಲದಿಂದ ಲೋಕವನ್ನುದ್ಧರಿಸಿದ ಬ್ರಹ್ಮಚೈತನ್ಯರು

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ರಾಮನಾಮದಲ್ಲಿ ಅದೆಷ್ಟು ಶಕ್ತಿ ಇದೆ ಎಂಬುದನ್ನು ಈ ಜಗತ್ತಿಗೆ ತೋರಿಸಿಕೊಟ್ಟವರು ಸದ್ಗುರು ಶ್ರೀ ಬ್ರಹ್ಮಚೈತನ್ಯರು. ರಾಮನಾಮದ ಬಲದಿಂದಲೇ ಈ ಲೋಕವನ್ನುದ್ಧರಿಸಿದ ಮಹಾತ್ಮರು ಬ್ರಹ್ಮಚೈತನ್ಯರು ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಹೇಳಿದರು.

ಪಟ್ಟಣದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಬುಧವಾರ ಆಚರಿಸಲಾದ ಶ್ರೀ ಬ್ರಹ್ಮಚೈತನ್ಯರ ತೊಟ್ಟಿಲೋತ್ಸವದದಲ್ಲಿ ಅವರು ಮಾತನಾಡಿದರು.



ಗೋಂದಾವಲೇಕರ್ ಮಹಾರಾಜ ಎಂದೂ ಕರೆಯಿಸಿಕೊಳ್ಳುವ ಶ್ರೀ ಬ್ರಹ್ಮಚೈತನ್ಯರು ರಾಮನಾಮದ ಜಪ ಸಾಧನೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಕೇವಲ ತಾವಷ್ಟೇ ಅಲ್ಲದೆ, ಜಗತ್ತಿನ ಎಲ್ಲ ಭಕ್ತರೂ ಈ ನಾಮದಿಂದಲೇ ಸದ್ಗತಿಯನ್ನು ಕಾಣಬೇಕೆಂಬ ಇಚ್ಛೆ ಅವರದ್ದಾಗಿತ್ತು. ಹೀಗಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಅನೇಕ ಭಾಗಗಳಲ್ಲಿ ಅವರು ಶ್ರೀರಾಮ ಮಂದಿರಗಳನ್ನು ಸ್ಥಾಪಿಸಿ ರಾಮನಾಮದ ಬಲವರ್ಧನೆಗೆ ಕಾರಣರಾದರು ಎಂದು ಹೇಳಿದರು.

ಮಹನೀಯರ ದಾರಿಯಲ್ಲಿ ನಡೆದಿರುವ ಹೆಬ್ಬಳ್ಳಿ ಶ್ರೀ ಚೈತನ್ಯಾಶ್ರಮದ ಶ್ರೀ ದತ್ತಾವಧೂತರು ರಾಮನಾಮ ಸ್ಮರಣೆಗೆ ತಮ್ಮ ಜೀವನವನ್ನು ಮುಡುಪಿಟ್ಟು, ಸಾಧ್ಯವಾದಷ್ಟು ಭಾವಿಕ ಭಕ್ತರಿಂದಲೂ ಈ ಕಾರ್ಯವನ್ನು ನೆರವೇರಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದ್ದಾರೆ ಎಂದು ಹೇಳಿದ ಕುಲಕರ್ಣಿ, ಬ್ರಹ್ಮಚೈತನ್ಯರ ಅನೇಕ ಲೀಲೆಗಳ ಬಗ್ಗೆ ವಿವರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ವೇ.ಮೂ. ವಿಶ್ವನಾಥಭಟ್ಟ ವೈದ್ಯ, ಎ.ಜಿ. ಕುಲಕರ್ಣಿ(ಕುರಗಡ್ಡಿ), ಎಸ್.ಎಚ್. ಕುಲಕರ್ಣಿ, ಆನಂದ ಕಾಳೆ, ವೆಂಕಟೇಶ ಕುಲಕರ್ಣಿ, ಆನಂದ ಕುಲಕರ್ಣಿ, ರಂಗನಾಥ ಕುಲಕರ್ಣಿ, ಜಗನ್ನಾಥ ಸೂರಭಟ್ಟನವರ ಮುಂತಾದವರಿದ್ದರು. ಸುಮಂಗಲೆಯರು ಸದ್ಗುರುಗಳನ್ನು ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡಿ ಜೋಗುಳ ಹಾಡಿದರು.

# ಶಿವಾಜಿಯ ರಾಷ್ಟ್ರಭಕ್ತಿ ಪ್ರೇರಣಾದಾಯಕ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿಯ ತಹಸೀಲ್ದಾರ ಕಚೇರಿಯಲ್ಲಿ ತಾಲೂಕಾ ಆಡಳಿತದ ಹಮ್ಮಿಕೊಂಡಿದ್ದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ತಹಸೀಲ್ದಾರ ಅನಿಲ ಬಡಿಗೇರ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಹಸೀಲ್ದಾರ ಅನಿಲ ಬಡಿಗೇರ, ಸ್ವಾಭಿಮಾನಿ ರಾಷ್ಟ್ರನಿರ್ಮಾಣಕ್ಕೆ ಹೋರಾಡಿದ ಛತ್ರಪತಿ ಶಿವಾಜಿ ಮಹಾರಾಜರು ಕೊಂಕಣ ಭಾಗದಲ್ಲಿದ್ದ ಅನೇಕ ಕೋಟೆಗಳನ್ನು ಗೆದ್ದು ಕ್ರಮೇಣ ಇಡೀ ಪಶ್ಚಿಮ ಭಾರತವನ್ನು ತಮ್ಮ ಆಳ್ವಿಕೆಗೆ ತಂದರು. ಶಿವಾಜಿ ಮಹಾರಾಜರ ಶೌರ್ಯ, ಸಾಹಸ ರಾಷ್ಟ್ರಭಕ್ತಿ ಎಲ್ಲರಿಗೂ ಪ್ರೇರಣಾದಾಯಕ ಎಂದರು. ಈ ಸಂದರ್ಭದಲ್ಲಿ ಮರಾಠ ಸಮಾಜದ ಮುಖಂಡ ಪರಮೇಶ ಪರಬ, ನಾಗರಾಜ ಲಕ್ಕುಂಡಿ, ಸಂದೀಪ ಕಪ್ಪತ್ತನವರ, ಶಿವನಗೌಡ ಪಾಟೀಲ, ಫಕ್ಕೀರೇಶ ರಟ್ಟಿಹಳ್ಳಿ, ಹೊನ್ನಪ್ಪ ಶಿರಹಟ್ಟಿ, ಅಶೋಕ ವರವಿ, ಮಹಾಂತೇಶ ದಶಮನಿ, ವೀರಣ್ಣ ಅಂಗಡಿ, ಪರಶುರಾಮ ಡೊಂಕಬಳ್ಳಿ, ಬಸವರಾಜ ವಡವಿ, ಕೃಷ್ಣಾ ಕಲಬುರ್ಗಿ ಮುಂತಾದವರು ಉಪಸ್ಥಿತರಿದ್ದರು.

### ಗದಗ ಜಿಲ್ಲಾ ಓಬಿಸಿ ಇಲಾಖಾ ಸಿಬ್ಬಂದಿಗಳ ಸಭೆಯಲ್ಲಿ ರವಿ ಗುಂಜೀಕರ

# ಸಮ್ಮೇಳನದ ಯಶಸ್ಸಿಗೆ ಕೈಜೋಡಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಫೆ.27 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸರಕಾರಿ ನೌಕರರ ಮಹಾಸಮ್ಮೇಳನದಲ್ಲಿ ಗದಗ ಜಿಲ್ಲೆಯ ವತಿಯಿಂದ 4 ಸಾವಿರ ಸರಕಾರಿ ನೌಕರರು ಭಾಗವಹಿಸುವ ಮೂಲಕ ಯಶಸ್ವಿಗೊಳಿಸಬೇಕೆಂದು ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರ ಕರೆ ನೀಡಿದರು.

ಗದಗ ಸರಕಾರಿ ನೌಕರ ಭವನದಲ್ಲಿ ಇತ್ತೀಚೆಗೆ ಫೆ.27ರ ಸರಕಾರಿ ನೌಕರರ ಮಹಾ ಸಮ್ಮೇಳನದ ಅಂಗವಾಗಿ ನಡೆಸಿದ ಗದಗ ಜಿಲ್ಲಾ ಓಬಿಸಿ ಇಲಾಖಾ ಸಿಬ್ಬಂದಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯನವರು 7ನೇ ವೇತನ ಆಯೋಗದ ವರದಿ ತರಿಸಿ ಅದರ ಪರಿಶೀಲನೆ ನಡೆಸಿ ಅನುಷ್ಠಾನ ಮಾಡುವ ಭರವಸೆಯನ್ನು ಮುಂಗಡಪತ್ರದಲ್ಲಿ ನೀಡಿದ್ದಾರೆ. ಈ ವೇತನದಲ್ಲಿ ನಿವೃತ್ತ ನೌಕರ ಬಾಂಧವರು, ವಿವಿಧ ವೃಂದಗಳ ನೌಕರರು, ನಿಗಮ ಮತ್ತು ಸ್ಥಳೀಯ ಸಂಸ್ಥೆಗಳ ನೌಕರ ಬಾಂಧವರು ಬರಲಿದ್ದಾರೆ. ಆ ಹಿನ್ನೆಲೆಯಲ್ಲಿ ಫೆ. 27ರಂದು ನಡೆಯಲಿರುವ ಸರಕಾರಿ ನೌಕರರ ಮಹಾಸಮ್ಮೇಳನದಲ್ಲಿ 7ನೇ ವೇತನ ಆಯೋಗದ ವ್ಯಾಪ್ತಿಯಲ್ಲಿ ಬರುವವರು ಎಲ್ಲರೂ ಭಾಗವಹಿಸಬೇಕಿದೆ ಎಂದರು.

ಇದಕ್ಕಾಗಿ ಗದಗ ಜಿಲ್ಲೆಯಿಂದ 30 ಬಸ್‌ಗಳ ವ್ಯವಸ್ಥೆಯನ್ನೂ ಮಾಡಲಾಗಿದೆ, ನೌಕರ ಬಾಂಧವರಿಗೆ 2 ದಿನದ ವಿಶೇಷ ಸಾಂದರ್ಭಿಕ ರಜೆಯನ್ನೂ ಕೊಡಿಸಲಾಗಿದೆ. ಪ್ರತಿಯೊಬ್ಬರೂ ಕಡ್ಡಾಯವಾಗಿ ಈ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ಸಮ್ಮೇಳನ ಯಶಸ್ವಿಗೆ ಕೈಜೋಡಿಸಬೇಕಿದೆ. ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯಾಧ್ಯಕ್ಷರಾದ ಸಿ.ಎಸ್.ಷಡಕ್ಷರಿ ಅವರ ಅಧ್ಯಕ್ಷತೆಯಲ್ಲಿ ಸಂಘ ನಿರಂತರವಾಗಿ ಸಂಘಟನೆಯಲ್ಲಿ ತೊಡಗಿ ಸರಕಾರಿ ನೌಕರರಿಗೆ ಅಗತ್ಯವಿರುವ ಹಲವಾರು ಆದೇಶಗಳನ್ನು ರಾಜ್ಯ ಸರಕಾರದಿಂದ ಹೊರಡಿಸಿ ಸರಕಾರಿ ನೌಕರರ ಜನಮನ್ನಣೆಗೆ ಭಾಜವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ಪದಾಧಿಕಾರಿ ಕೆ.ಬಿ. ಕೊಣ್ಣೂರು, ಓಬಿಸಿ ತಾಲೂಕು ಅಧಿಕಾರಿಗಳಾದ ಚುಂಚಾ, ಕಲ್ಮಠ ಸೇರಿದಂತೆ 200 ಸಿಬ್ಬಂದಿಗಳಿದ್ದರು.

# ಭಾವೈಕ್ಯತೆಯ ವಾತಾವರಣ ನಿರ್ಮಿಸುವುದು ಎಲ್ಲರ ಕರ್ತವ್ಯ

▶▶ಮೊದಲನೇ ಪುಟದಿಂದ

ತೋಂಟದ ಸಿದ್ಧಲಿಂಗ ಶ್ರೀಗಳ ಕುರಿತು ಪ್ರೊ. ಬಿ.ಆರ್ ಪೊಲೀಸ್‌ಪಾಟೀಲ ಬರೆದ 'ಉರಿಯ ಗದ್ದುಗೆ' ಕಾದಂಬರಿ ಹಾಗೂ ಭೋಜರಾಜ ಸೊಪ್ಪಿಮಠ ಸಂಪಾದಿಸಿದ 'ಕರುಣಾಮಯಿ ಭಾಗ-2' ಗ್ರಂಥಗಳು ಲೋಕಾರ್ಪಣೆಗೊಂಡವು.

ಇತ್ತೀಚೆಗೆ ಕರ್ನಾಟಕ ಸರ್ಕಾರದ ರಾಷ್ಟ್ರೀಯ ಬಸವ ಪುರಸ್ಕಾರಕ್ಕೆ ಆಯ್ಕೆಯಾದ ಸಾಹಿತಿಗಳಾದ ಡಾ. ವೀರಣ್ಣ ರಾಜೂರ, ಡಾ. ಎನ್.ಜಿ. ಮಹಾದೇವಪ್ಪ ಅವರನ್ನು ಸಂಮಾನಿಸಲಾಯಿತು. ಸನ್ಮಾನೋತ್ತರವಾಗಿ ಡಾ.ವೀರಣ್ಣ ರಾಜೂರ ಮಾತನಾಡಿ, ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ನನ್ನದು ತಾಯಿ-ಮಗುವಿನ ಸಂಬಂಧವಿದ್ದ ಹಾಗೆ. ನಾನು ಶರಣ ಸಾಹಿತ್ಯದಲ್ಲಿ ಕೃಷಿ ಮಾಡಲು ಹಾಗೂ ನನಗೆ ಬಸವ ಪುರಸ್ಕಾರ ಸಿಗಲು ಲಿಂಗೈಕ್ಯ ಗುರುಗಳು ನೀಡಿದ ಪ್ರೇರಣೆ-ಪ್ರೋತ್ಸಾಹವೇ ಕಾರಣವಾಗಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ ಸನತ್‌ಕುಮಾರ ಬೆಳಗಲಿ ಮಾತನಾಡಿ, ಬಸವತತ್ವದ ಪ್ರಸಾರಕ್ಕೆ ನಿರಂತರವಾಗಿ ಮೀಸಲಾಗಿದ್ದ ಸಿದ್ಧಲಿಂಗ ಮಹಾಸ್ವಾಮಿಗಳು ಯಾವುದೇ ಒಂದು ಕೋಮಿಗೆ ಸೀಮಿತವಾದ ಶ್ರೀಗಳಾಗಿರಲಿಲ್ಲ. ಶ್ರೀಮಠದ ಜಾತ್ರಾ ಮಹೋತ್ಸವದಲ್ಲಿ ಅಲ್ಪಸಂಖ್ಯಾತರನ್ನು ಅಧ್ಯಕ್ಷರನ್ನಾಗಿಸಿದ ಶ್ರೀಗಳು, ಮಸೀದಿ ನಿರ್ಮಾಣಕ್ಕೆ ತಮ್ಮ ಮಠದ ಜಮೀನನ್ನು ದಾನವಾಗಿ ನೀಡಿರುವುದು ಮಾದರಿಯಾಗಿದೆ. ಕಪ್ಪತಗುಡ್ಡವನ್ನು ಗಣಿಗಾರಿಕೆಯಿಂದ ರಕ್ಷಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಶ್ರೀಗಳು ಮನುಷ್ಯರ ನಡುವಿನ ಗೋಡೆಗಳನ್ನು ಕೆಡವಿ ಮಾನವಬಂಧುತ್ವ ಬೆಳೆಸಿದ ಅಪರೂಪದ ಯತಿಗಳಾಗಿದ್ದರು ಎಂದರು.



ಅತಿಥಿಗಳಾಗಿ ಭಾಗವಹಿಸಿದ್ದ ನ್ಯೂಜಿಲೆಂಡ್ ಬಸವಸಮಿತಿ ಸಂಸ್ಥಾಪಕರಾದ ಲಿಂಗಣ್ಣ ಕಲಬುರ್ಗಿ ಮಾತನಾಡಿದರು. ಭೈರನಹಟ್ಟಿ-ಶಿರೋಳ ಮಠದ ಶಾಂತಲಿಂಗ ಮಹಾಸ್ವಾಮಿಗಳು, ಆಳಂದದ ಕೋರಣೇಶ್ವರ ಮಹಾಸ್ವಾಮಿಗಳು, ಕೋಲಶಾಂತೇಶ್ವರಮಠದ ಶಾಂತಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳು, ಮಹಾಂತ ಸ್ವಾಮಿಗಳು ಸೇರಿದಂತೆ ವಿವಿಧ ಹರ-ಗುರು-ಚರಮೂರ್ತಿಗಳು ಸಮ್ಮುಖ ವಹಿಸಿದ್ದರು.

ತೋಂಟದಾರ್ಯ ಮಠದ ಆಡಳಿತಾಧಿಕಾರಿ ಪ್ರೊ. ಎಸ್. ಎಸ್. ಪಟ್ಟಣಶೆಟ್ಟರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಹಾಗೂ ಗುರುಬಸವ ಶಾಲೆಯ ವಿದ್ಯಾರ್ಥಿಗಳಿಂದ ವಚನನೃತ್ಯವೈಭವ ಜರುಗಿತು. ವಿವೇಕಾನಂದಗೌಡ ಪಾಟೀಲ ಹಾಗೂ ವೀರನಗೌಡ ಮರಿಗೌಡ್ರ ನಿರೂಪಿಸಿದರು.

ವೇದಿಕೆ ಮೇಲೆ ಮಾಜಿ ಸಚಿವ ಎಸ್.ಎಸ್. ಪಾಟೀಲ, ಮಾಜಿ ಸಂಸದ ಐ.ಜಿ. ಸನದಿ, ಸಾಹಿತಿಗಳಾದ ಅಕ್ಬರ ಕಾಲಿಮಿರ್ಚಿ, ಶಶಿಧರ ತೋಡಕರ, ಜಾತ್ರಾ ಸಮಿತಿ ಅಧ್ಯಕ್ಷ ಡಾ. ಎಸ್.ಬಿ. ಶೆಟ್ಟರ, ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ, ಬಿ.ವ್ಹಿ. ಶಿರೂರ, ಕೊಟ್ರೇಶ ಮೆಣಸಿನಕಾಯಿ ಇದ್ದರು.

ಪೂಜ್ಯರ 75ನೇ ಜಯಂತಿ ಅಂಗವಾಗಿ 75 ಮಕ್ಕಳು ಶ್ರೀಗಳ ರೂಪಕವನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಎಲ್.ನಾರಾಯಣಸ್ವಾಮಿ, ಮೋಹನ ಆಲಮೇಲಕರ, ಶೇಖಣ್ಣ ಕವಳಿಕಾಯಿ, ಕೆ.ಎಸ್. ಚಟ್ಟಿ, ವಿದ್ಯಾಧರ ದೊಡ್ಡಮನಿ ಸೇರಿದಂತೆ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸಹಸ್ರಾರು ಅಭಿಮಾನಿಗಳು ಉಪಸ್ಥಿತರಿದ್ದರು.

# ಹಿದಾಯತ್-ಜೆ.ಯು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ




**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತಾಜ್‌ನಗರ ಹಿದಾಯತ್ ಪೂರ್ವ ಪ್ರಾಥಮಿಕ ಹಾಗೂ ಜೆ.ಯು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ, ಮಕ್ಕಳ ವೇಷಭೂಷಣ ಸ್ಪರ್ಧೆ ಹಾಗೂ 8ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಜರುಗಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಡಾ.ರೊನಾಲ್ಡೋ ಖಾನಾಪುರ, ಅತಿಥಿಗಳಾಗಿ ಪೂಜಾ ಬೇವೂರ್ ಆಗಮಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಜನಾಬ ಕೆ.ಐ. ಶೇಖ ಪ್ರಸ್ತಾವಿಕ ನುಡಿಗಳನ್ನಾಡಿ, ಶಾಲೆಯ ಶೈಕ್ಷಣಿಕ ವರ್ಷದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರೊಂದಿಗೆ ತಮ್ಮ ಪ್ರತಿಭೆಯನ್ನು ಬೆಳೆಸಿಕೊಂಡು ತಮ್ಮ ಕಲಿಕಾ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಜುನ್ಯೆದ್ ಉಮಚಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗುವುದರೊಂದಿಗೆ ತಮ್ಮ ಪ್ರತಿಭೆ ಹಾಗೂ ಶಾಲೆಯ ಘನತೆಯನ್ನು ಹೆಚ್ಚಿಸಲಬೇಕೆಂದರು.

ಈ ಸಂದರ್ಭದಲ್ಲಿ ಪ್ರಧಾನ ಗುರು ಅಬ್ದುಲ್ ಹಫೀಜ್ ಉಪಸ್ಥಿತರಿದ್ದರು. ನಿರ್ಮಲಾ ಗಡಾದ ಸ್ವಾಗತಿಸಿದರು. ಸಹ ಶಿಕ್ಷಕಿ ಹೇಮಾ ಐ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ರೇಶ್ಮಾ ಟಕ್ಕೆದ ವಂದಿಸಿದರು.

# ಧರ್ಮದ ಹಾದಿಯಲ್ಲಿ ಸಾಗಿ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಎಲ್ಲರೂ ಧರ್ಮದ ಹಾದಿಯಲ್ಲಿ ಸಾಗಿದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದು ಅಗಡಿ ಗುತ್ತಲ ಪ್ರಭುಸ್ವಾಮಿಮಠದ ಗುರುಸಿದ್ದ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ 156ನೇ ಜಾತ್ರಾ ಮಹೋತ್ಸವದ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಲಕ್ಷಾಂತರ ಜೀವರಾಶಿಗಳಲ್ಲಿ ಮಾನವ ಜನ್ಮ ದೊಡ್ಡದಾಗಿದ್ದು, ಧರ್ಮ ಮಾರ್ಗದಲ್ಲಿ ಸಾಗಿದಾಗ ಬದುಕು ಹಸನಾಗುತ್ತದೆ ಎಂದರು.

ಮುಳಗುಂದ ಗವಿಮಠ ಹಾಗೂ ಧಾರವಾಡ ಮುರುಘಾಮಠದ ಡಾ. ಮಲ್ಲಿಕಾರ್ಜುನ ಮಾಹಾಸ್ವಾಮೀಜಿ, ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗದೇವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜಾತ್ರಾ ಸಮಿತಿ ಅಧ್ಯಕ್ಷ ಬಸವರಾಜ ಬಾತಾಖಾನಿ, ಡಾ. ಎಸ್.ಸಿ. ಚವಡಿ, ಎಂ.ಡಿ. ಬಟ್ಟೂರ, ಚನ್ನಬಸಯ್ಯ ನಪೂರಿಮಠ, ಎಸ್.ಸಿ. ಕುರ್ತಕೋಟಿ, ಮಾಹಾಂತೇಶ ಕೋರಿ, ಕೆ.ಎಲ್. ಕರಿಗೌಡರ, ಗಂಗಪ್ಪ ಸುಂಕಾಪೂರ, ಮುರುಗಯ್ಯ ನಪೂರಿಮಠ, ಸಂಜಯ ನೀಲಗುಂದ, ವಿಜಯ ನೀಲಗುಂದ, ಮಂಜುನಾಥ ಮಟ್ಟಿ, ಎಸ್.ಎಂ. ಉಜ್ಜಣ್ಣವರ, ಮಂಜುನಾಥ ಲಾಳಿ, ರಾಮಣ್ಣ ಕುಲಕರ್ಣಿ ಸೇರಿದಂತೆ ಸದ್ಭಕ್ತರು ಇದ್ದರು.

# ನೌಕರರ ಸಮ್ಮೇಳನದ ಕರಪತ್ರ ಬಿಡುಗಡೆ



**■ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಸರಕಾರಿ ನೌಕರ ಸಂಘ ಫೆ.27ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ ರಾಜ್ಯ ಸರಕಾರಿ ನೌಕರರ ಮಹಾ ಸಮ್ಮೇಳನದ ಅಂಗವಾಗಿ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರ ಅವರು ಭಿತ್ತಿ ಮತ್ತು ಕರ ಪತ್ರಗಳನ್ನು ಇತ್ತೀಚೆಗೆ ಗದಗ ಜಿಲ್ಲಾ ಸರಕಾರಿ ನೌಕರ ಭವನದಲ್ಲಿ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಪದಾಧಿಕಾರಿಗಳಾದ ಕೆ.ಬಿ.ಕೊಣ್ಣೂರ, ಗದಗ ಜಿಲ್ಲಾ ಹಿಂದುಳಿದ ವಗಗಳ ಕಲ್ಯಾಣ ಇಲಾಖಾ ತಾಲೂಕಾಧಿಕಾರಿ ಚುಂಚಾ, ಕಲ್ಮಠ ಮುಂತಾದವರಿದ್ದರು.

## ಶ್ರೀ ರೇಣುಕಾಚಾರ್ಯ ಶಾಲೆಯ ಸಾಂಸ್ಕೃತಿಕ ಹಬ್ಬ ನಾಳೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಶ್ರೀ ಜಗದ್ಗುರು ಪಂಚಾಚಾರ್ಯ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆ ಹಿರೇಮಠದ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಮಕ್ಕಳ ಸಾಂಸ್ಕೃತಿಕ ಹಬ್ಬ ಫೆ23ರ ಮಧ್ಯಾಹ್ನ 2ಕ್ಕೆ ಹಿರೇಮಠದ ಸಭಾಭವನದಲ್ಲಿ ಜರುಗಲಿದೆ ಎಂದು ಶಾಲಾ ಮುಖ್ಯೋಪಾಧ್ಯಾಯೆ ನಿರ್ಮಲಾ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಫೆ.22ರ ಬೆಳಿಗ್ಗೆ 10ಕ್ಕೆ ಶಾಲೆಯ ಆವರಣದಲ್ಲಿ ಶ್ರೀ ಮಹಾಸರಸ್ವತಿ ಪೂಜೆ, ಪಾಲಕರ ಸಭೆ, ವಿಜ್ಞಾನ ವಸ್ತುಪ್ರದರ್ಶನ ಹಾಗೂ 7ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಜರುಗಲಿದ್ದು, ಪಟ್ಟಣದ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸವಿತಕ್ಕನವರು ಮುಖ್ಯ ಅತಿಥಿಗಳಾಗಿ ಮತ್ತು ಕೆ.ಜಿ.ಎಸ್. ಶಾಲೆಯ ಮುಖ್ಯ ಶಿಕ್ಷಕ ಬಿ.ಬಿ. ಕುರಿ ನಿರ್ಣಾಯಕರಾಗಿ ಆಗಮಿಸಲಿದ್ದಾರೆ.

ಫೆ. 23ರ ಮಕ್ಕಳ ಸಾಂಸ್ಕೃತಿಕ ಹಬ್ಬ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನವನ್ನು ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಮ್. ಹುರಳಿ ಉದ್ಘಾಟಿಸಲಿದ್ದು, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್. ಕಳಕೊಣ್ಣವರ ಹಾಗೂ ನರೇಗಲ್ಲದ ಸಿಆರ್‌ಪಿ ಜೆ.ಎಂ. ಬೇಲೇರಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಈ ಎರಡೂ ಸಮಾರಂಭಗಳ ದಿವ್ಯ ಸಾನ್ನಿಧ್ಯವನ್ನು ಸಂಸ್ಥೆಯ ಅಧ್ಯಕ್ಷರೂ, ನರೇಗಲ್ಲ ಹಿರೇಮಠದ ಪೀಠಾಧಿಪತಿಗಳೂ ಆಗಿರುವ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರು ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಿರಹಟ್ಟಿ ಪಟ್ಟಣದಾದ್ಯಂತ 144 ಸೆಕ್ಷನ್ ಜಾರಿ | ಎಲ್ಲೆಡೆ ಪೊಲೀಸ್ ಸರ್ಪಗಾವಲು

# ಜ.ಫಕೀರೇಶ್ವರ ಮಠಕ್ಕೆ ದಿಗ್ಬಂಧನ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿಯ ಕರ್ತೃ ಶ್ರೀ ಜ.ಫಕೀರೇಶ್ವರರ ಭಕ್ತರು ಮತ್ತು ಜ.ಫ. ದಿಂಗಾಲೇಶ್ವರ ಸ್ವಾಮೀಜಿ ಫೆ.21ರಂದು ಗದಗ ನಗರದಲ್ಲಿ ಕರಾಳ ದಿನಾಚರಣೆ ಮಾಡುವುದಾಗಿ ನಿರ್ಧರಿಸಿದ್ದಕ್ಕೆ ತಾಲೂಕಾಡಳಿತ ಬ್ರೇಕ್ ಹಾಕಲು ಫೆ.20ರ ಮಧ್ಯರಾತ್ರಿಯಿಂದಲೇ ಪಟ್ಟಣದಾದ್ಯಂತ 144 ಕಲಂ ಜಾರಿಗೊಳಿಸಿ ಪ್ರತಿಭಟನೆಯನ್ನು ತಡೆಹಿಡಿಯುವಲ್ಲಿ ಯಶಸ್ವಿಯಾಯಿತು.

ಫೆ21ರಂದು ಗದಗ ನಗರದಲ್ಲಿ ಲಿಂ. ತೋಂಟದ ಸಿದ್ದಲಿಂಗ ಶ್ರೀಗಳ ಜಯಂತಿ ಆಚರಣೆಯ ಅಂಗವಾಗಿ ಆಯೋಜಿಸಿದ್ದ ಭಾವೈಕ್ಯತಾ ದಿನಾಚರಣೆಯನ್ನು ವಿರೋಧಿಸಿ ಶಿರಹಟ್ಟಿಯ ಜ.ಫ.ದಿಂಗಾಲೇಶ್ವರ ಸ್ವಾಮೀಜಿ ಹಾಗೂ ಭಕ್ತರು ಗದಗ ನಗರದಲ್ಲಿ ಇದಕ್ಕೆ ಪ್ರತಿಯಾಗಿ ಕರಾಳ ದಿನಾಚರಣೆಯನ್ನು ಆಚರಿಸುವುದಾಗಿ ಘೋಷಿಸಿದ್ದರು. ಆದರೆ ತಾಲೂಕಾಡಳಿತ ಮಂಗಳವಾರ ರಾತ್ರಿಯೇ ಪಟ್ಟಣದ ಕೆಲವರ ಮೇಲೆ ನೋಟೀಸ್ ಜಾರಿ ಮಾಡಿ, ಪಟ್ಟಣದಾದ್ಯಂತ ಮತ್ತು ಶ್ರೀಮಠದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದರಿಂದ ಶ್ರೀಮಠಕ್ಕೆ ಯಾರೂ ಪ್ರವೇಶಿಸದಂತೆ ಪೊಲಿಸರು ತಡೆಹಿಡಿದರು.


ಪತ್ರಿಕಾಗೋಷ್ಠಿ ನಡೆಸಿ ಬೆಳ್ಳಟ್ಟಿಯ ಶಾಲಾ ಕಟ್ಟಡ ವೀಕ್ಷಣೆಗೆ ತೆರಳುತ್ತಿದ್ದ ಜ.ಫ. ದಿಂಗಾಲೇಶ್ವರ ಸ್ವಾಮೀಜಿಗಳನ್ನೂ ಮಠದಿಂದ ಹೊರಬಿಡದಂತೆ ಪೊಲೀಸರು ಶ್ರೀಗಳ ಕಾರನ್ನು ತಡೆದರು. ಈ ಸಂದರ್ಭದಲ್ಲಿ ದಿಂಗಾಲೇಶ್ವರ ಸ್ವಾಮೀಜಿ ಹಾಗೂ ಪೊಲೀಸರ ನಡುವೆ ಕೆಲಕಾಲ ವಾಗ್ವಾದ ನಡೆಯಿತು.



ಪ್ರತಿಭಟನೆ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ನೇತೃತ್ವದಲ್ಲಿ ಪಟ್ಟಣದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸ್ವತಃ ಎಸ್‌ಪಿ ಅವರೇ ಬುಧವಾರ ಬೆಳಿಗ್ಗೆ ಪಟ್ಟಣಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಜೊತೆಗೆ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಹೆಚ್ಚಿನ ಜನಸಂದಣಿ ಸೇರದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ಗದಗ ಡಿಎಸ್‌ಪಿ ಜಡ್.ಎಚ್. ಇನಾಮದಾರ, ಶಿರಹಟ್ಟಿ ಸಿಪಿಐ ನಾಗರಾಜ ಮಾಢಳ್ಳಿ, ಲಕ್ಷ್ಮೇಶ್ವರದ ಈರಣ್ಣ ರಿತ್ತಿ ಹಾಗೂ ಇನ್ನಿತರ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಗದಗನಲ್ಲಿ ನಡೆಯಬೇಕಿದ್ದ ನಮ್ಮ ಕರಾಳ ದಿನವನ್ನು, ಪ್ರತಿಭಟನೆಯನ್ನು ಹತ್ತಿಕ್ಕುವ ಕೆಲಸ ಮಾಡಿದ್ದಾರೆ. ಆದರೆ ಅಲ್ಲಿ ಜಯಂತಿ ಆಚರಣೆಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ನಮ್ಮ ಭಕ್ತರು ಯಾವುದೇ ತಪ್ಪು ಮಾಡಿದಿದ್ದರೂ ಸಹ ಅವರ ಮೇಲೆ ವಿನಾಕಾರಣ ನೋಟೀಸ್ ಜಾರಿ ಮಾಡಿ ಬೆದರಿಸುವ ಕೆಲಸ ಮಾಡಿದ್ದಾರೆ. ಮಧ್ಯರಾತ್ರಿ ವೇಳೆ ಮನೆ ಮನೆಗೆ ತೆರಳಿ ನೋಟೀಸ್ ನೀಡಿದ್ದಾರೆ. ಆದ್ದರಿಂದ ಈ ಕೂಡಲೇ ನಮ್ಮ ಭಕ್ತರು ಮೇಲೆ ಹೊರಡಿಸಿದ ನೋಟೀಸುಗಳನ್ನು ಹಿಂಪಡೆಯಬೇಕು. ಇಲ್ಲದೇ ಹೋದಲ್ಲಿ ನಾಳೆಯಿಂದ ಮತ್ತೆ ಬೇರೆ ಹಂತದ ಹೋರಾಟ ಕೈಗೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಡಳಿತ ಗಮನಹರಿಸಬೇಕು. ಸುದೀರ್ಘ ಇತಿಹಾಸವಿರುವ, ಭಾವೈಕ್ಯತೆಯ ಪೀಠಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಲಾಗುವುದು ಎಂದು ಜ.ಫ.ದಿಂಗಾಲೇಶ್ವರ ಸ್ವಾಮೀಜಿ ಶ್ರೀಮಠದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## ಮಾಹಿತಿ ತಂತ್ರಜ್ಞಾನ ಪ್ರಕೋಷ್ಠದ ಪದಾಧಿಕಾರಿಗಳ ನೇಮಕ



■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಮಾಹಿತಿ ತಂತ್ರಜ್ಞಾನ ಪ್ರಕೋಷ್ಠದ ನೂತನ ಜಿಲ್ಲಾ ಸಂಚಾಲಕರಾಗಿ ತಮ್ಮನಗೌಡ ಶಿಲವಂತರ, ಸಹ-ಸಂಚಾಲಕರಾಗಿ ಮುತ್ತು ಚಿನ್ನಪ್ಪಗೌಡ್ರ, ಸದಸ್ಯರಾಗಿ ವಿಶ್ವನಾಥ ದಲಾಲಿ, ಜಾರ್ಜ್ ದಂಡಾವತಿ ಇವರುಗಳನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಗದಗ ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಮಾಹಿತಿ ತಂತ್ರಜ್ಞಾನ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ನಿತೀನ್‌ರಾಜ್, ಪ್ರಧಾನ ಕಾರ್ಯದರ್ಶಿಗಳಾದ ಪಕ್ಕಿರೇಶ ರಟ್ಟಿಹಳ್ಳಿ, ಆರ್.ಕೆ. ಚವ್ಹಾನ, ಮಂಜುನಾಥ, ಸಂತೋಷ ಅಕ್ಕಿ, ವಿಶ್ವನಾಥ ಶಿರಿಗಣ್ಣವರ, ಮಾಂತೇಶ ತುರಕಾಣಿ, ಪಕ್ಕಿರಪ್ಪ ಪ್ಯಾಟಿ, ಸಂತೋಷ ರೂಪನವರ, ಮಾರುತಿ ಪರಿಮಳದ, ಬಸವರಾಜ ಚಳಗೇರಿ, ಕುಮಾರ ಹಳ್ಳಿಕೇರಿ, ಗಂಗಾಧರ ಅಂಕದ, ಮುತ್ತು ಕರಮುಡಿ, ಮಲ್ಲು ಪಾಟೀಲ್, ಅನಿಲ ಕಾರಬಾರಿ, ನಾಗರಾಜ ವಡ್ಡಟ್ಟಿ, ಬಸವರಾಜ ಮೇಬಿ, ಶಂಬು ಸಬಿಗೊಡ, ಶಿವರಾಜ ಒಂಟೇರಿ, ರಾಜುಮಾರಶಿ, ದೇವು ಪಾಟೀಲ, ಗೋಪಾಲ ದಿಂಡೂರ, ರಾಮನಗೌಡ ಪಾಟೀಲ, ಪ್ರಮೋದ ನಾಡಗೌಡರ, ಬಸವರಾಜ ಇದ್ಲಿ, ಆನಂದ ಕುಂಬಾರ, ಮುತ್ತು ಮಠದ, ಸೋಮು ಸಂದಿಗೋಡ, ಸುನೀಲ ಪಾಟೀಲ, ಬಸವರಾಜ ಕೊಪ್ಪಳ ಮುಂತಾದವರಿದ್ದರು.

## ರಾಜ್ಯ ಮದ್ಯ ಮಾರಾಟಗಾರರ ಪ್ರತಿಭಟನೆ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಫೆಡರೇಶನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಬೆಂಗಳೂರು ಹಾಗೂ ಗದಗ ಜಿಲ್ಲಾ ಮದ್ಯ ಮಾರಾಟಗಾರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಫೆ.22ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಬೇಡಿಕೆಗಳ ಈಡೇರಿಕೆಗಾಗಿ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಲಿದ್ದೇವೆ ಎಂದು ಗದಗ ಜಿಲ್ಲಾ ಮದ್ಯ ಮಾರಾಟಗಾರರ ಸಂಘದ್ದಧ್ಯಕ್ಷ ವಿಠ್ಠಲ ಖಟವಟೆ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಪ್ರತಿಭಟನೆಯಲ್ಲಿ ಗದಗಿನಿಂದ 30 ಜನ ಸನ್ನದುದಾರರು ಪಾಲ್ಗೊಳ್ಳಿದ್ದಾರೆ ಎಂದು ತಿಳಿಸಿದರು. ಸುದರ್ಶನ ಹಾನಗಲ್, ವಿಕಾಸ್ ಚವಾಣ್ ಅಶೋಕ್ ಬೇವಿನಕಟ್ಟಿ, ಅರ್ಜುನ್ ಕಲಾಲ್, ಭೀಮು ಕಲಾಲ್, ವಿನಾಯಕ ಕಬಾಡಿ, ಯಮನಪ್ಪ ಈಳಿಗೇರ, ವೆಂಕಟೇಶ್ ಖಟವಟೆ ಸೇರಿದಂತೆ ಎಲ್ಲ ಸನ್ನದುದಾರರು ಉಪಸ್ಥಿತರಿದ್ದರು.

## 'ಪುಷ್ಠಿ' ಸಮತೋಲಿತ ಆಹಾರ



■ವಿಜಯಸಾಕ್ಷಿ ಸುದ್ದಿ, ಗದಗ

ಬಾಲ್ಯದಲ್ಲಿ ಮಕ್ಕಳಿಗೆ ಅಹಾರದ ಕೊರತೆ ಆಗದಂತೆ ಬಲಿಷ್ಠವಾಗಿ ಬೆಳೆಯಲು ಅಂಗನವಾಡಿ ಆಹಾರದಲ್ಲಿ ಪುಷ್ಠಿ ಬಹಳ ಉಪಯುಕ್ತವಾದ ಆಹಾರವಾಗಿದ್ದು, ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗಿದೆ. ಎಲ್ಲಾ ತಾಯಂದಿರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹುಲಕೋಟಿ ಗ್ರಾ.ಪಂ ಅಧ್ಯಕ್ಷೆ ನಾಗರತ್ನಾ ಬಾಳಿಹಳ್ಳಿಮಠ ಹೇಳಿದರು.

ಇಲ್ಲಿನ ಹುಲಕೋಟಿಯ ಕೃಷ್ಣಾ ಕಾಲೋನಿಯ ಅಂಗನವಾಡಿ ಕೇಂದ್ರದಲ್ಲಿ ಬಾಲವಿಕಾಸ ಸಮಿತಿಯ ಅಡಿಯಲ್ಲಿ ಆಹಾರ ಜಾಗೃತಿ ಸಭೆ ಮತ್ತು ಅಹಾರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಾಲೆಯ ಪ್ರಧಾನ ಗುರುಗಳಾದ ಎ.ವಿ. ಪ್ರಭು ಮಾತನಾಡಿ, ಪುಷ್ಠಿ ಸರ್ವ ಸಮತೋಲಿತ ಆಹಾರವಾಗಿದೆ. ಅದನ್ನು ಎಲ್ಲರೂ ಶಿಶು-ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಸರಿಯಾದ ಪ್ರಮಾಣದಲ್ಲಿ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಮಮತಾಜಬಿ ನದಾಫ್, ಅಶ್ವಿನಿ ಕಲಬುರ್ಗಿ, ತನುಜಾ ಕೆಂಪಣ್ಣವರ, ಶೈಲಾ ದೊಡ್ಡಮನಿ, ಲಕ್ಷ್ಮೀ ಕೈದ್ಯಾರ, ಮೃತ್ಯಂಜಯ ಅಬ್ಬಿಗೇರಿಮಠ, ನಿರ್ಮಲಾ ಹೂವಿನಹಳ್ಳಿ ಮೊದಲಾದವರು ಹಾಜರಿದ್ದರು.

ಅಂಗನವಾಡಿ ಕೇಂದ್ರದ ಶಿಕ್ಷಕಿ ಚಂದ್ರಕಲಾ ದೂದನಕರ ಸ್ವಾಗತಿಸಿ, ವಂದಿಸಿದರು.

### ಕಸಾಪ 'ಮಾಸದ ಮಾತು' ಕಾರ್ಯಕ್ರಮ ಸರಣಿಯ 10ನೇ ಸಂಚಿಕೆ

# ಸರ್ವಜ್ಞ ತ್ರಿಪದಿಗಳು ಮನುಕುಲದ ಸಂಪತ್ತು




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕನ್ನಡ ಸಾಹಿತ್ಯಕ್ಕೆ ಸರ್ವಜ್ಞರ ತ್ರಿಪದಿಗಳು ಎಂದೆಂದಿಗೂ ಅಜರಾಮರವಾಗಿದ್ದು, ಸರ್ವಜ್ಞನ ವ್ಯಕ್ತಿತ್ವ ನಿತ್ಯ ಅನಿಕೇತನವಾದುದು. ಒಂದೇ ಕಡೆ ನಿಲ್ಲದೆ ಗಾಳಿಯ ಅಲೆಯಂತೆ ಜಗ ಸುತ್ತಿದವನು. ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದ್ದು ಹಿಂಡನಗಲಿದ ಗಜದಂತೆ ಜಗ ಸುತ್ತಿ ಜಗದ ಜನರ ಜೀವನವನ್ನು ಅರಿತವನು ಎಂದು ಉಪನ್ಯಾಸಕ ಸಿ.ಎಸ್. ಹಿರೇಮಠ ಅಭಿಪ್ರಾಯಪಟ್ಟರು.

ಅವರು ತಾಲೂಕ ಕಸಾಪದ ಮಾಸದ ಮಾತು ಕಾರ್ಯಕ್ರಮ ಸರಣಿಯ 10ನೇ ಸಂಚಿಕೆಯಲ್ಲಿ ಸರ್ವಜ್ಞನ ಜಯಂತಿಯ ಅಂಗವಾಗಿ ಪಟ್ಟಣದ ಬಸ್ತಿಬಣದ ಮಹಾರಾಜ ಮಂದಿರದಲ್ಲಿ ಸರ್ವಜ್ಞನ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿದರು.

ಮೂರು ಸಾಲುಗಳ ಹೊಟ್ಟೆಯಲ್ಲಿ ಮೂಜಗ ತೋರಿದ ದಿಟ್ಟ ಸರ್ವಜ್ಞ, ನೇರ, ದಿಟ್ಟ, ಪ್ರಾಮಾಣಿಕತೆ, ವೈಚಾರಿಕತೆಗಳನ್ನು ಗರ್ಭಿಸಿರುವ ಅವರ ತ್ರಿಪದಿಗಳು ಮಾನವ ಕುಲದ ಸಂಪತ್ತು. ಅವು ನಿಜಕ್ಕೂ ಅಗಾಧತೆಯ ನಿಜಾಸಾಗರ. ಅವರು ನೀಡಿರುವ ಒಂದೊಂದು ವಚನ ಸಮ ಸಮಾಜದ ಚಿಂತನೆಗೆ ಪೂರಕವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಸರ್ವಜ್ಞ ಚಿಂತನ ಹಂಚಿಕೊಂಡ ಟೀಮ್ ಚಿರನೂತನದ ಷಣ್ಮುಖ ಗಡ್ಡೆಣ್ಣನವರ ಎಲ್ಲರೊಳು ಒಂದಾಗಿ, ಎಲ್ಲರನ್ನು ಗುರುವಾಗಿ ಕಂಡು, ಎಲ್ಲರಲ್ಲೂ ಇರುವ ವಿದ್ಯೆ ಯನ್ನು ಗ್ರಹಿಸಿ, ಸಂಗ್ರಹಿಸಿ ತಮ್ಮದಾಗಿಸಿಕೊಳ್ಳುವದೆ ಆಗಿದೆ ಎಂಬುದು ತ್ರಿಕಾಲ ಜ್ಞಾನಿ ಸರ್ವಜ್ಞನ ವಿಚಾರವಾಗಿತ್ತು ಎಂದರು.

ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೇಡ್ಲೇರಿ, ಮನುಕುಲಕ್ಕೆ ಸರ್ವಜ್ಞನ ಪ್ರತಿಯೊಂದು ನುಡಿಗಳು ಅರ್ಥಪೂರ್ಣವಾಗಿವೆ. ಸರ್ವಜ್ಞ ಎಂದರೆ ನಾನು ಎಲ್ಲ ತಿಳಿದವನು ಎಂಬ ಅರ್ಥವಲ್ಲ. ಸರ್ವರೊಳು ಒಂದೊಂದು ನುಡಿ ಕಲಿತವನ ಎಂಬ ಅರ್ಥವು ಕಲಿಕೆಗಿರುವ ಸಾಮಾಜಿಕ, ಜಾನಪದೀಯ ಆಯಾಮವನ್ನು ಎತ್ತಿ ತೋರಿಸುತ್ತದೆ. ವಿದ್ಯೆಯ ಪರ್ವತವಾಗುವುದು ನಾವೇನೋ ಅಪೂರ್ವವಾದದ್ದನ್ನು ಕಲಿತು ಜ್ಞಾನ ಸಿದ್ಧಿಸಿಕೊಳ್ಳುವುದರಲ್ಲಿಲ್ಲ ಎಂದು ಹೇಳಿದರು.

ಹಿರಿಯ ಸಮಾಜ ಚಿಂತಕ ಮಹಾದೇವಪ್ಪ ಕುಂಬಾರ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯ ಪ್ರಶಸ್ತಿಗೆ ಭಾಜನರಾದ ಪತ್ರಕರ್ತರಾದ ದಿಗಂಬರ ಪೂಜಾರ ಹಾಗೂ ಮಾಳಿಂಗರಾಯ ಪೂಜಾರರನ್ನು ಸನ್ಮಾನಿಸಲಾಯಿತು. ಸಿಆರ್‌ಪಿ ಚಂದ್ರಶೇಖರ ವಡಕಣ್ಣವರ ಸರ್ವಜ್ಞನ ತ್ರಿಪದಿಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಬಸವರಾಜ ಹುಲಮನಿ, ಯಲ್ಲಪ್ಪ ಚಕ್ರಸಾಲಿ ದೇವಪ್ಪ ಕುಂಬಾರ, ಹಿರಿಯ ಸಾಹಿತಿ ಎಸ್. ಎಫ್. ಆದಿ, ಐ.ಎ. ಬಳಿಗಾರ, ವಿ.ಎಮ್. ಹೂಗಾರ, ಎನ್.ಪಿ. ಪ್ಯಾಟಿಗೌಡ, ಈಶ್ವರ ಬನ್ನಿಕೊಪ್ಪ, ಪಿ.ಎಚ್. ಕೊಂಡಾಬಿಂಗಿ, ಶಿವಾನಂದ ಚಕ್ರಸಾಲಿ, ಮಲ್ಲಪ್ಪ ಹಾಲಗುಂಡಿ, ಶಿವಪ್ರಕಾಶ್ ಗುಡಿಗೇರಿ, ಈರಣ್ಣ ರಿತ್ತಿ, ಸಿದ್ದಪ್ಪ ನೀರಲಗಿ, ಸುರೇಶ ಕಾಕಡೆ ಮುಂತಾದವರು ಉಪಸ್ಥಿತರಿದ್ದರು.

ಕಸಾಪ ಗೌರವ ಕಾರ್ಯದರ್ಶಿ ಮಂಜುನಾಥ ಚಾಕಲಬ್ಬಿ ಸ್ವಾಗತಿಸಿದರು. ಎಸ್.ಬಿ. ಅಣ್ಣಿಗೇರಿ, ಅಕ್ಷತಾ ಹಡಪದ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ನಾಗರಾಜ ಮಜ್ಜಿಗುಡ್ಡ, ಈರಣ್ಣ ಗಾಣಿಗೇರ ವಂದಿಸಿದರು.

## ಕರ್ನಾಟಕ ರಾಜ್ಯ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಆನ್‌ಲೈನ್ ಮೂಲಕ ನೋಂದಣಿ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟವನ್ನು 2024ನೇ ಮಾರ್ಚ್ 1 ಮತ್ತು 2ರಂದು ಆಯೋಜಿಸಲಾಗುವುದು. ಭಾಗವಹಿಸುವ ಆಸಕ್ತಿ ಉಳ್ಳವರು ಸರಕಾರಿ ನೌಕರರು ಕಡ್ಡಾಯವಾಗಿ ಈ ಬಾರಿ ಆನಲೈನ್ ಮೂಲಕವೇ ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ. ನೋಂದಣಿಯನ್ನು ಮಾಡಿಕೊಳ್ಳಲು ಈ ಲಿಂಕ್ ಬಳಸಿ https://forms.gle/MNhs8VEz4ZCgskr89 ಆನಲೈನ್ ಮೂಲಕ ನೋಂದಣಿ ಮಾಡಲು ಕೊನೆಯ ದಿನ ಫೆಬ್ರವರಿ 25 ಆಗಿದ್ದು, ಆನಲೈನ್ ಮೂಲಕವೇ ಭರ್ತಿ ಮಾಡುವದು.

ಆಫ್ಲೈನ್‌ಗೆ ಅವಕಾಶವಿಲ್ಲ. ಕಡ್ಡಾಯವಾಗಿ ಇಂಗ್ಲೀಷ್ ವರ್ಣಮಾಲೆಯ ಕ್ಯಾಪಿಟಲ್ ಅಕ್ಷರಗಳಲ್ಲಿ ಭರ್ತಿ ಮಾಡಬೇಕು. ಆನ್ಲೈನ್ ಲಿಂಕ್ ಬಳಸಿ ಫಾರ್ಮ್ ಭರ್ತಿ ಮಾಡುವ ಮುನ್ನ ತಮ್ಮ ಇತ್ತೀಚಿನ ಭಾವಚಿತ್ರ ಹಾಗೂ ಸೇವಾ ಪ್ರಮಾಣಪತ್ರ ಹೊಂದಿರಬೇಕು ಇದನ್ನು ಅಪಲೋಡ್ ಮಾಡಬೇಕಾಗುತ್ತದೆ. ಅಥ್ಲೆಟಿಕ್ಸ್ ನಲ್ಲಿ ಗರಿಷ್ಠ 3, ಗುಂಪು ಸ್ಪರ್ಧೆಗಳಲ್ಲಿ ಗರಿಷ್ಠ 1, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗರಿಷ್ಠ 2 ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸುವುದು.

ಕಚೇರಿ ಮುಖ್ಯಸ್ಥರಿಂದ ದೃಢೀಕರಿಸಿಲ್ಪಟ್ಟ ಸೇವಾ ಪ್ರಮಾಣ ಪತ್ರ ಹೊಂದಿರಬೇಕು. ಕೆಜಿಐಡಿ ನಂಬರ್ ಹೊಂದಿರುವ, ಕನಿಷ್ಠ ಆರು ತಿಂಗಳು ಸೇವಾ ಅವಧಿ ಹೊಂದಿರುವ ಖಾಯಂ ನೌಕರರು ಮಾತ್ರ ಅರ್ಹರು. ಕ್ರೀಡಾಕೋಟಾದಲ್ಲಿ ಆಯ್ಕೆಯಾದ ನೌಕರರು ಭಾಗವಹಿಸುವಂತಿಲ್ಲ. ಕ್ರೀಡಾ ತರಬೇತುದಾರರು, ದೈಹಿಕ ಶಿಕ್ಷಕರು, ಪ್ಯಾರಾಮಿಲಿಟರಿ, ಪೊಲೀಸ್,ಆರ್ ಪಿ ಎಫ್, ಅಗ್ನಿಶಾಮಕ ದಳ ಮುಂತಾದ ಸಮವಸ್ತ್ರ ಆಧಾರಿತ ಸಿಬ್ಬಂದಿಯವರು ದಿನಗೂಲಿ ನೌಕರರು, ಹೊರಗುತ್ತಿಗೆ ನೌಕರರು, ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ & ಬ್ಯಾಂಕ್ ಸಿಬ್ಬಂದಿ ಭಾಗವಹಿಸಲು ಅರ್ಹರಿರುವುದಿಲ್ಲ.

ಸ್ಥಳೀಯ ಸಂಸ್ಥೆ, ನಿಗಮ ಮಂಡಳಿ, ಪ್ರಾಧಿಕಾರಗಳಲ್ಲಿನ ಕೆಜಿಐಡಿ ನಂಬರ್ ಹೊಂದಿರುವ ಖಾಯಂ ನೌಕರರು ಮಾತ್ರ ಅರ್ಹರಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ.

## ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಸನ್ಮಾರ್ಗ ವಿದ್ಯಾರ್ಥಿಗಳ ಸಾಧನೆ



■ವಿಜಯಸಾಕ್ಷಿ ಸುದ್ದಿ, ಗದಗ

ಸ್ಥಳೀಯ ಸ್ಟೂಡೆಂಟ್ ಎಜ್ಯುಕೇಶನ್ ಸಂಸ್ಥೆಯ ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು 2024ನೇ ಸಾಲಿನಲ್ಲಿ ಜರುಗಿದ ಜೆಇಇ ಮೇನ್ಸ್ ಮೊದಲನೆ ಅವಧಿಯ ಪರೀಕ್ಷೆಯಲ್ಲಿ ಸಾಧನೆಗೈದಿದ್ದಾರೆ.

ಮಜೀನ ಮಹಮ್ಮದ ಅತ್ತರ್ ಮನಿಯಾರ (97.74), ವಿನಯ ಮೋಹನ್ ಹೊಸೂರ (91.64), ಪರ್ವ ಜೈನ್ (80.3), ರವಿರಾಜ ಹವಾಲ್ದಾರ (73.61), ಲಕ್ಷ್ಮೀನರಸಿಂಹ ಚನ್ನಕೇಶವ ಹಲಗಿ (73.61) ಅಂಕಗಳೊಂದಿಗೆ ಸಾಧನೆ ಮಾಡಿದ್ದಾರೆ. ಸಮರ್ಥ ಪಿ.ಬಲಬದ್ರಿ ಹಾಗೂ ಇನ್ನಿತರ ವಿದ್ಯಾರ್ಥಿಗಳು ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದಿದ್ದಾರೆ.

ಪರೀಕ್ಷೆಯಲ್ಲಿ ಅಪೂರ್ವ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ, ಆಡಳತ ಮಂಡಳಿಯ ಸದಸ್ಯರಾದ ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ರೋಹಿತ್ ಒಡೆಯರ್, ಪ್ರೊ. ಸಯ್ಯೆದ್ ಮತೀನ್ ಮುಲ್ಲಾ, ಪ್ರೊ. ರಾಹುಲ್ ಒಡೆಯರ್ ಆಡಳಿತಾಧಿಕಾರಿ ಎಂ.ಸಿ. ಹಿರೇಮಠ, ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ, ಉಪನ್ಯಾಸಕ ಬಳಗ ಮತ್ತು ಸಿಬ್ಬಂದಿಯವರು ಅಭಿನಂದಿಸಿ ಶುಭ ಹಾರೈಸಿದ್ದಾರೆ.


ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಇಂಜಿನೀಯರರು,**

**ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ**

ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ ಕಿ.ಇಂ/ಟೆಂಡರ್/2023-24/1384 ದಿನಾಂಕ : 21.02.2024

**ಟೆಂಡರ್ ಪ್ರಕಟಣೆ**

ಪಂಚಾಯತ ರಾಜ್ ಇಂಜಿನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು **"ಇ ಪ್ರೊಕ್ಯುರಮೆಂಟ್-2"** ಮುಖಾಂತರ ಕರೆಯಲಾಗಿದೆ.

| ಕ್ರ. ಸಂ | ಇಂಡೆಂಟ್ ಸಂಖ್ಯೆ/ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ | ಮುಂಗಡ ಠೇವಣಿ ಮೊತ್ತ |
|---|---|---|---|
| 1 | Construction of OHT at Jigalur Village in Ron Taluk/call-4 | **9.85** ಲಕ್ಷಗಳು | **25,000.00** |

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೊಕ್ಯೂರಮೆಂಟ್ "ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ : **22.02.2024**, ಪ್ರಶ್ನೋತ್ತರದ ಕೊನೆಯ ದಿನಾಂಕ : **28.02.2024**. ಟೆಂಡರ ಸ್ವೀಕರೀಸುವ ಕೊನೆಯ ದಿನಾಂಕ : **29.02.2024** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02.03.2024** ಆರ್ಥಿಕ ಬಿಡ್ ತೆರೆಯುವ ದಿನಾಂಕ : **04.03.2024**

**ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/564/2023-24


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka